
ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಜನವರಿ-೨೦೦೫ ಸಂಚಿಕೆ-೯



ನಕ್ಸಲೀಯರು ನಮ್ಮ ಗಣರಾಜ್ಯ ಮೇಲಣ ಹುಣ್ಣು

ಜನಪದ ವಿಚಾರದಲ್ಲಿ

ಜನವರಿ ೨೦೦೫.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜನವರಿ-೨೦೦೫
ಸಂಪುಟ ೫
ಸಂಚಿಕೆ ೬

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

(08236)298754

e-mail - janapada@yahoo.com

ಮಕ್ಕಳ ಮೊರೆ

ಹಡೆದವರೆ;
ನಿಮ್ಮ ಮಕ್ಕಳಾದ ನಾವು
ನಿಮ್ಮ ಬಿತ್ತನೆಯ ಬೆಳೆ
ನಮಗೆಂದೂ ಬೇಕಾದುದು
ನಿಮ್ಮ ಪ್ರೀತಿಯ ಮಳೆ;
ನಮಗೆಂದೂ ಬೇಡವಾದುದು
ನಿಮ್ಮ ವಿರಸದ ಕಳೆ!

ಶಿಲ್ಪಿಗಳೇ;
ಕಲಿಯಲು ಬರುವ ನಾವು
ನಿಮ್ಮ ಕೈ ಸೇರುವ ಮಣ್ಣು,
ಅಕ್ಕರೆಯ ಚಳಕದಿ ತಿದ್ದಲು
ನಾವಾಗುವೆವು ಕಾಂತಿಯ ಕಣ್ಣು,
ಅಸಡ್ಡೆಯಿಂದ ತೀಡಿ ತಳ್ಳಲು
ನಾವಾಗುವೆವು ಕಾಡುವ ಹುಣ್ಣು।

ಹಿತೈಷಿಗಳೇ;
ಬೀದಿ ಬದಿಯಲಿರುವ ನಾವು
ಹೆತ್ತವರ ಕಾಣದ ಮುಗ್ಧರು,
ಆಸರೆ-ಅಕ್ಕರೆ ಕಾಣದೆ
ನಾವಾಗಿರುವೆವು ವಿದಗ್ಧರು;
ಆಸರೆ-ಅಕ್ಕರೆ ಸಿಕ್ಕರೆ
ನಾವಾಗುವೆವು ವಿಶುದ್ಧರು।

ದುಡಿಸುವವರೇ;
ದುಡಿಯುವ ಕಡು ಬಡವರ
ಕರುಳಿನ ಕುಡಿಗಳು ನಾವು
ದುಡಿಮೆ-ಬಡತನಗಳಿಗೂ
ವಾರಸುದಾರರು ನಾವು;
ಸ್ಥಿತಿಗೆಟ್ಟೆಮ್ಮನು ಇನ್ನು
ಹಿಂಡದಿರಿ ಸ್ಥಿತಿವಂತರಾದ ನೀವು।

-ಎಲ್. ನರಸಿಂಹಯ್ಯ ತೊಂಡೋಟಿ.

ವಿಚಾರ ದೀಪ್ತಿ

ಕಾವ್ಯವೆಂದರೆ ಏನು? ಮನುಷ್ಯನ ಹೃದಯದಲ್ಲಿ ಅವನಿಗೆ ಇಷ್ಟವೆನಿಸುವ ಅನುಭವವನ್ನುಂಟು ಮಾಡಿಸಬಲ್ಲ ವಾಕ್ಯಸಮುದಾಯವೇ ಕಾವ್ಯ. ಎದೆಯನ್ನು ತಳಮಳಗೊಳಿಸುವುದು ಕಾವ್ಯವೆಂಬ ವಾಙ್ನಿರ್ಮಾಣದ ಲಕ್ಷಣ. ಅದನ್ನು ಕೇಳಿದಾಗ ನಮ್ಮ ಒಳಗಡೆ ಏನೋ ಒಂದು ಆಗಬೇಕು. ಮನಸ್ಸಿನೊಳಗೆ ಆಹಾ! ಎನ್ನಿಸಬೇಕು, ಓಹೋ! ಎನ್ನಿಸಬೇಕು, ಅಯ್ಯೋ! ಎನ್ನಿಸಬೇಕು, ಭೇಷ್! ಭಲಾ!! ಎನ್ನಿಸಬೇಕು. ಹೀಗೆ ಒಂದು ಕನಿಕರದ, ಅಥವಾ ಅಚ್ಚರಿಯ, ಅಥವಾ ರೋಷದ, ಅಥವಾ ಸಂತೋಷಾತಿಶಯದ ಕೂಗು ಎದೆಯೊಳಗಿಂದ ಹೊರಡುವಂತೆ ಮಾಡುವ ಅನುಭವ ಯಾವುದೋ ಅದೇ ರಸ. ಅಂಥ ರಸವು ನಮ್ಮ ಅಂತರಂಗದಲ್ಲಿ ಒಸರುವಂತೆ ಮಾಡಬಲ್ಲ ವಾಕ್ಪ್ರಬಂಧ ಯಾವುದೋ ಅದು ಕಾವ್ಯ.

ನಮ್ಮ ಪೂರ್ವಿಕರು ಕಾವ್ಯರಹಸ್ಯವನ್ನು ಕುರಿತು ತುಂಬಾ ಜಿಜ್ಞಾಸೆ ನಡೆಸಿದ್ದಾರೆ. ವಾಕ್ಕಿನ ರೀತಿಯಿಂದ ಕಾವ್ಯವೆಂದು ಕೆಲವರು, ಅಲಂಕಾರದಿಂದ ಕಾವ್ಯವೆಂದು ಕೆಲವರು, ಧ್ವನಿಯಿಂದ ಕಾವ್ಯವೆಂದು ಕೆಲವರು, ವಕ್ರೋಕ್ತಿಯಿಂದ ಕಾವ್ಯವೆಂದು ಕೆಲವರು, ರಮಣೀಯಾರ್ಥದಿಂದ ಕಾವ್ಯವೆಂದು ಕೆಲವರು ವಾದಿಸಿದ್ದಾರೆ. ಆ ಎಲ್ಲ ವಾದಗಳೂ ಅಬದ್ಧಗಳೇನಲ್ಲ; ಆದರೆ ಏಕದೇಶೀಯಗಳು, ಆದದ್ದರಿಂದ ಅಪೂರ್ಣಗಳು. ರಸವೆಂಬುದೇ ಕಾವ್ಯಸಾರವೆಂಬ ಮತವು ಲೋಕಜನಾಂಗೀಯಕೃತವಾಗಿದೆ. ಕಾವ್ಯವೆಂಬ ಮಾನುಷ ಸಂಪತ್ತು ಸರ್ವಲೋಕ ಸಾಮಾನ್ಯವಾದದ್ದು. ಅದು ಸಂಸ್ಕೃತ ಭಾಷೆಯೊಂದರ ವಿಶೇಷ ಸ್ವತ್ತೇನೂ ಅಲ್ಲ. ಸೃಷ್ಟಿಯಲ್ಲಿ ಮನುಷ್ಯನ ಪ್ರಥಮ ಜನನ ಎಂದು ಆಯಿತೋ, ಅದರೊಡನೆಯೇ ಅಂದು, ಅಲ್ಲಿ ಕಾವ್ಯ ಜನನವೂ ಆಯಿತು. ಮನುಷ್ಯ ಎಂದರೆ ಮನಸ್ಸು; ಮನಸ್ಸು ಎಂದರೆ ಚಿಂತೆ ಸಂತಸಗಳು; ಚಿಂತೆ ಸಂತಸಗಳು ಮಾತಾಗಿ ಉಕ್ಕಿ ಹರಿದದ್ದೇ ಕಾವ್ಯ.

–ಡಿ. ವಿ. ಜಿ.

ನಕ್ಸಲೀಯರು ನಮ್ಮ ಗಣರಾಜ್ಯ ಮೇಲಣ ಹುಣ್ಣು

"ಯಾರಿಗೆ ಯಾವ ನೆಲ ಸಿಗಬೇಕೊ ಅದನ್ನವರಿಗೆ ಕೊಡಬೇಕು. ಇಲ್ಲವಾದರೆ ಸರ್ವನಾಶ ಖಂಡಿತ." *-ಮಹಾಭಾರತ.*

ನಮ್ಮ ಸ್ವಾತಂತ್ರ್ಯ ಹುಟ್ಟುಹಾಕಿದ ಅನೇಕ ಸಮಸ್ಯೆಗಳಲ್ಲಿ ಗಮನೀಯವಾದದ್ದು ನಕ್ಸಲೀಯರ ಭಯೋತ್ಪಾದನೆ ಮತ್ತು ಹಿಂಸಾಚಾರ. ನಕ್ಸಲೀಯರ ಕಾರ್ಯಕ್ಷೇತ್ರ ಕೇವಲ ಆಂಧ್ರ ಪ್ರದೇಶಕ್ಕೆ ಸೀಮಿತವಾಗಿರದೆ ಕರ್ನಾಟಕವನ್ನೂ ಒಳಗೊಂಡಂತೆ ಇತರ ರಾಜ್ಯಗಳಿಗೂ ವಿಸ್ತರಿಸಿದೆ. ದೇಶದ ಸುಮಾರು ೧೨೫ ತಾಲ್ಲೂಕುಗಳಲ್ಲಿ ನಕ್ಸಲಿಯರು ಸಕ್ರಿಯರಾಗಿದ್ದಾರೆ ಮತ್ತು ಸುಮಾರು ೧೮,೦೦ ನಕ್ಸಲೀಯರು ಕೋವಿಹಿಡಿದಿದ್ದಾರೆ. ಕ್ರಮೇಣ ನಕ್ಸಲೀಯರು ಇಡೀ ದೇಶವನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುವ ಸೂಚನೆಗಳು ಕಂಡು ಬರುತ್ತಿವೆ. ದೇಶದೊಳಗೆ ಗೆರಿಲ್ಲಾ ಮಾದರಿಯ ಯುದ್ಧದ ಛಾಯೆ ಪಸರಿಸುತ್ತಿದೆ. ಒಂದು ಗಣರಾಜ್ಯೋತ್ಸವದಿಂದ ಇನ್ನೊಂದು ಗಣರಾಜ್ಯೋತ್ಸವಕ್ಕೆ ಅವರ ಬಲ ಹೆಚ್ಚಾಗುತ್ತಿದೆ. ಭಾರತೀಯರಾದ ನಕ್ಸಲೀಯರು ಹಿಂಸಾಚಾರಕ್ಕೆ ತೊಡಗಿರುವುದರಿಂದ ಸರ್ಕಾರ ಸ್ವತಃ ತನ್ನ ಪ್ರಜೆಗಳನ್ನು ತಾನೇ ಕೊಲ್ಲುವ ಹೀನ ಸ್ಥಿತಿಗೆ ಮುಟ್ಟಿದೆ. ಹಿಂಸಾಚಾರಣೆಯ ದೃಷ್ಟಿಯಿಂದ ನೋಡಿದಾಗ ಸರ್ಕಾರ ಮತ್ತು ನಕ್ಸಲೀಯರು ಒಂದೇ ತಕ್ಕಡಿಯಲ್ಲಿ ತೂಗುತ್ತಾರೆ. ವ್ಯತ್ಯಾಸವೆಂದರೆ ಒಂದು ಸಂಘಟಿತ ಮತ್ತು ಶಾಸನ ಬದ್ಧವಾಗಿದೆ; ಇನ್ನೊಂದು ಅಸಂಘಟಿತ ಮತ್ತು ಶಾಸನಬಾಹಿರ ಸಂಘಟನೆಯಾಗಿದೆ.

ಇವರಿಬ್ಬರ ಮಧ್ಯೆ ಅಪನಂಬಿಕೆ, ಅವಿಶ್ವಾಸ ಮತ್ತು ವಿಶ್ವಾಸಘಾತುಕತನ ಬಹಳಷ್ಟು ಬೆಳೆದಿದೆ. ಈ ಪ್ರಕಾರದ ಎರಡು ಸಂಘಟನೆಗಳ ಮಧ್ಯದಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಿರುವ ಚಕಮಕಿಯನ್ನು ಜನಸಾಮಾನ್ಯರು ಅರ್ಥವಾಗದ ದೃಷ್ಟಿಯಿಂದಲೂ, ಉದಾಸೀನತೆಯಿಂದಲೂ ಮತ್ತು ನಿಸ್ಸಹಾಯಕತೆಯಿಂದಲೂ ನೋಡುತ್ತಿದ್ದಾರೆ. ನಕ್ಸಲೀಯರ ಸಮಸ್ಯೆಗೆ ಪರಿಹಾರವೇನೆಂದು ಸ್ಪಷ್ಟವಾಗಿ ಗೊತ್ತಾಗದೆ ಸರ್ಕಾರ ತಡವರಿಸುತ್ತಿದೆ. ನಿರ್ದಿಷ್ಟ ಪರಿಹಾರವನ್ನು ಸೂಚಿಸಲು ನಕ್ಸಲೀಯರೂ ವಿಫಲರಾಗುತ್ತಿದ್ದಾರೆ. ಪರಿಹಾರ ಸೂಚಿಸಿದ್ದರೂ ಆ ಪರಿಹಾರಗಳು ಕಾರ್ಯಸಾಧುವಾಗಿ ಕಾಣುತ್ತಿಲ್ಲ. ಹೀಗೆ ಸರ್ಕಾರ ಮತ್ತು ನಕ್ಸಲೀಯರ ಮಧ್ಯ ಕಳೆದ ೪೦ ವರ್ಷಗಳಿಂದಲೂ ಹಗ್ಗದೆಳೆದಾಟ ನಡೆದಿದೆ. ಆದ್ದರಿಂದ ನಕ್ಸಲೀಯರ ಚಟುವಟಿಕೆ ಒಂದರ್ಥದಲ್ಲಿ ನಮ್ಮ ಗಣರಾಜ್ಯ ಮೇಲಣ ಹುಣ್ಣಾಗಿ ಪರಿಣಮಿಸಿದೆ. ಆ ಹುಣ್ಣಿಗೆ ಸಧ್ಯಕ್ಕೆ ಯಾವ ಔಷಧಿಯೂ ದೊರೆಯುತ್ತಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಉದ್ಭವಿಸಬಹುದಾದ ವಿವಿಧ ಬಗೆಯ ಸಮಸ್ಯೆಗಳಿಗೆ ಉತ್ತರವನ್ನು

ಕಂಡುಕೊಳ್ಳಲು ಸಂವಿಧಾನ ಪ್ರಯತ್ನಿಸಿದೆ. ಆದರೆ ನಕ್ಸಲೀಯರೆಂಬ ಭಯೋತ್ಪಾದಕರು, ಹಿಂಸಾವಾದಿಗಳು ಹುಟ್ಟುವುದಕ್ಕೆ ಕಾರಣವಾಗುವಂಥ ಸನ್ನಿವೇಶಗಳನ್ನು ಹೋಗಲಾಡಿಸಲು ಮಾತ್ರ ಸಂವಿಧಾನ ವಿಫಲವಾಗಿದೆ. ಬಹುಶಃ ಇದಕ್ಕೆ ಸಂವಿಧಾನ ರಚನಾಕಾರರು ತಮ್ಮ ಸಮಕಾಲೀನ ಸಮಸ್ಯೆಗಳಾಚೆಗಿನ ಸಮಸ್ಯೆಗಳನ್ನು ಊಹಿಸಲು ಹಾಗೂ ಅವುಗಳಿಗೆ ಪರಿಹಾರ ಸೂಚಿಸಲು ವಿಫಲವಾದುದು ಕಾರಣವಾಗಿರಬೇಕು.

ಸಂವಿಧಾನ ಜಾರಿಗೆ ಬಂದುದು ೧೯೫೦ರಲ್ಲಿ. ನಕ್ಸಲೀಯರು ತಲೆಯೆತ್ತಿದ್ದು ೧೯೬೫ರ ಸುಮಾರಿನಲ್ಲಿ. ಆ ಹೊತ್ತಿಗೆ ಮೂರು ಮಹಾ ಚುನಾವಣೆಗಳು, ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದಿದ್ದವು. ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದಿತ್ತು. ಕಡ್ಡಾಯ ಶಿಕ್ಷಣವೂ ಜಾರಿಗೆ ಬಂದಿತ್ತು. ಈ ಪ್ರಕಾರದ ರಾಷ್ಟ್ರ ನಿರ್ಮಾಣದ ಕೆಲಸ ನಡೆದಿದ್ದರೂ ಸಹ ನಕ್ಸಲೀಯರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಕೋವಿ ಹಿಡಿದು ಹಿಂಸಾಚಾರವನ್ನು ತಮ್ಮ ಧರ್ಮವನ್ನಾಗಿ ಮಾಡಿಕೊಂಡು ಕಾನೂನು ಸುವ್ಯವಸ್ಥೆಯನ್ನು ಕಿತ್ತೊಗೆಯುವ ಬಂಡಾಯಗಾರರಾದುದಕ್ಕೆ ಏನು ಕಾರಣಗಳೆಂಬ ವಿಚಾರವಾಗಿ ಸಾಮಾಜಿಕವಾಗಿ ಚಿಂತನೆ ನಡೆದಿಲ್ಲ. ರಾಜಕೀಯವಾಗಿಯೂ ವಿಚಾರ ನಡೆದಿಲ್ಲ. ಒಂದರ್ಥದಲ್ಲಿ ನಕ್ಸಲೀಯರ ಹೋರಾಟ ತಮಗೆ ಸಂಬಂಧಿಸಿದ್ದಲ್ಲ ಎಂಬ ಮನೋಭಾವ ದೇಶದ ಭವಿಷ್ಯ ರೂಪಿಸುವ ಕಾರ್ಯದಲ್ಲಿ ತೊಡಗಿರುವ ವ್ಯವಸ್ಥೆಗಳದ್ದಾಗಿದೆ. ಬುದ್ಧಿಜೀವಿಗಳಂತೂ ನಕ್ಸಲೀಯರ ಚಟುವಟಿಕೆಗಳಿಂದ ಗಾವುದ ದೂರವಿದ್ದಾರೆ. ಆಂಧ್ರ ಪ್ರದೇಶದಲ್ಲಿ ಮತ್ತು ಇನ್ನಿತರೆಡೆ ಆಸಕ್ತ ನಾಗರಿಕರ ಸಮಿತಿಗಳು (ಸಿ.ಸಿ.ಸಿ) ರಚನೆಯಾಗಿರುವುದು ಉತ್ತಮ ಬೆಳವಣಿಗೆಯಾಗಿದ್ದರೂ ಅದು ನಕ್ಸಲೀಯರ ಮತ್ತು ಸರ್ಕಾರದ ಮಧ್ಯ ಸೇತುಬಂಧನವಾಗಲು ಸಾಧ್ಯವಾಗಿಲ್ಲ. ನಕ್ಸಲೀಯರ ಸಮಸ್ಯೆಗಳನ್ನು ಮತ್ತು ಅವರ ಮನೋ ಇಂಗಿತವನ್ನು ವ್ಯವಸ್ಥಿತವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ ಏಕೈಕ ವಿಚಾರವಾದಿ ಕೆ.ಜಿ.ಕಣ್ಣಾಭಿರಾನ್. ಇವರು ಸುಪ್ರಸಿದ್ಧ ಮಾನವ ಹಕ್ಕುಗಳ ವಕೀಲರು ಮತ್ತು ಸಾಮಾಜಿಕ ಕ್ರಿಯಾಶೀಲ ವ್ಯಕ್ತಿ. ಇವರು ಕೊಟ್ಟಿರುವ ವರದಿಯನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಂಗೀಕರಿಸಿದೆ. ಆದರೆ ಈ ಅಧ್ಯಯನವು ಸಹ ಸರ್ಕಾರ ಹಾಗೂ ನಕ್ಸಲೀಯರ ಮಧ್ಯ ಇರುವ ಅವಿಶ್ವಾಸವನ್ನು ನಿವಾರಿಸಲು ವಿಫಲವಾಗಿದೆ. ಕೇಂದ್ರ ಸರ್ಕಾರವನ್ನು ಮೊದಲ್ಗೊಂಡು ಎಲ್ಲ ಸರ್ಕಾರಗಳು ನಕ್ಸಲೀಯರನ್ನು ತಮ್ಮ ಉಗ್ರಶತ್ರುಗಳೆಂದೇ ಭಾವಿಸಿದೆ. ಇವರಿಬ್ಬರ ಮಧ್ಯ ಹರಿಯುತ್ತಿರುವ ರಕ್ತಕ್ಕೆ ಪರಸ್ಪರರಲ್ಲಿಯ ವಿದ್ವೇಷ ಕಾರಣವಾಗಿದೆ. ನಕ್ಸಲೀಯರ ದಮನಕ್ಕಾಗಿ ಸರ್ಕಾರಗಳು ಪೋಟಾದಂತ ಕಾನೂನನ್ನು ಸಹ ಉಪಯೋಗಿಸುತ್ತಿವೆ. ಅಲ್ಲದೆ ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲೀಷರು ಭಾರತೀಯರ ದಮನಕ್ಕಾಗಿ ಉಪಯೋಗಿಸುತ್ತಿದ್ದಂಥ ಅನೇಕ ಕಾನೂನುಗಳನ್ನು ಇಂದಿನ ಸರ್ಕಾರ ನಕ್ಸಲೀಯರ ವಿರುದ್ಧ ಪ್ರಯೋಗಿಸುತ್ತಿದೆ.

ನಕ್ಸಲೀಯರ ಬಂಡಾಯಕ್ಕೆ ಕಾರಣಗಳೇನೆಂಬುದನ್ನು ಗಂಭೀರವಾಗಿ ಗುರ್ತಿಸಿ,

ಅವುಗಳ ನಿವಾರಣೆಗಾಗಿ ಅಷ್ಟೇ ಗಂಭೀರತೆಯಿಂದ ಪ್ರಯತ್ನಿಸುವುದು ಈ ಕಾಲದ ಕರ್ತವ್ಯವಾಗಿದೆ. ಆದರೆ ನಕ್ಸಲೀಯರು ಯಾವ ವಿಚಾರದ ಸಾಧನೆಗಾಗಿ ಮತ್ತು ಯಾವ ಪ್ರಕಾರದ ಸಮಾಜರಚನೆಗಾಗಿ ಹೋರಾಟ ನಡೆಸಿದ್ದಾರೆಂಬುದು ಮಾತ್ರ ಇದುವರೆಗೂ ಸ್ಪಷ್ಟವಾಗಿಲ್ಲ. ವಿಚಿತ್ರ ವಿಷಯವೇನೆಂದರೆ ಸಾಮಾನ್ಯ ಜನರಿಗೆ ನಕ್ಸಲೀಯರ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ಅಲ್ಲದೆ ಸ್ವತಃ ನಕ್ಸಲೀಯರಿಗೇ ತಮ್ಮ ನಿರ್ದಿಷ್ಟ ಆದರ್ಶವೇನು ಹಾಗೂ ಸಿದ್ಧಾಂತವೇನು ಎಂಬುದು ಗೊತ್ತಿದೆಯೆ ಎಂಬುದೂ ಸಹ ಸಂಶಯ. ಹೀಗೆ ವೈಚಾರಿಕವಾಗಿ ಶೂನ್ಯತೆಯನ್ನು ಹೊಂದಿರುವವರು ಅಸಹಾಯಕತೆಗೆ ಒಳಗಾಗಿ ವಾಮಮಾರ್ಗವನ್ನು ಹಿಡಿಯುವುದು ಸಹಜ. ಇಂಥದೆ ಸ್ಥಿತಿ ನಕ್ಸಲೀಯರದಾಗಿದೆ. ಆದ್ದರಿಂದ ಅವರು ಪ್ರಚಲಿತ ಭ್ರಷ್ಟ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದಿದ್ದಾರೆ. ಆ ವ್ಯವಸ್ಥೆಯನ್ನು ಶಸ್ತ್ರಬಲದಿಂದ ಕಿತ್ತೆಸೆಯಲು ಯೋಚಿಸಿದ್ದಾರೆ. ಇದಕ್ಕಾಗಿ ಲೂಟಿಮಾಡುವುದು, ಕೊಲ್ಲುವುದು ಮತ್ತು ಅರಾಜಕತೆಯನ್ನು ಉಂಟುಮಾಡುವುದು ಇವರ ಮಾರ್ಗಗಳಾಗಿವೆ. ಅವರು ಶ್ರೀಮಂತರ ವೈರಿ, ಬಡವರ ಬಂಧು ಹಾಗೂ ತುಳಿತಕ್ಕೊಳಗಾದವರ ಪರವಾಗಿ ಯಾವ ಸಂಧಾನವನ್ನೂ ಮಾಡಿಕೊಳ್ಳದೆ ಹೋರಾಡುವವರಾಗಿದ್ದಾರೆ. ಈ ಮಾರ್ಗಗಳು ಮಾವೋ ಸಿದ್ಧಾಂತಗಳನ್ನು ಹೋಲುತ್ತವೆ. ೪೦ ವರ್ಷಗಳಿಗೂ ಮಿಕ್ಕಿ ಅವರು ಹೋರಾಟ ನಡೆಸಿದ್ದರೂ ಸಾಧಿಸಿದ್ದೇನು? ೪೦ ವರ್ಷಗಳ ದೀರ್ಘಕಾಲದ ಹೋರಾಟದ ಬಹುಭಾಗ ಭೂಗತವಾಗಿರುವುದರಲ್ಲಿಯೆ ಕಳೆದುಹೋಗಿದೆ. ಸತ್ತವರ ಸಂಖ್ಯೆ ಸಾವಿರಾರು. ಇವರಲ್ಲಿ ಅಮಾಯಕ ನಾಗರಿಕರೂ ಸೇರಿದ್ದಾರೆ. ನಕ್ಸಲೀಯರ ನಾಯಕರಲ್ಲೊಬ್ಬರಾದ ನಾಗಭೂಷಣ ಪಟ್ನಾಯಕ್ ೧೭ ವರ್ಷಗಳ ಕಾಲ ಜೈಲಿನಲ್ಲಿಯೆ ಕಳೆದಿದ್ದಾರೆ.

ನಕ್ಸಲೀಯರು ಸಂವಿಧಾನದ ಕಕ್ಷೆಯೊಳಗೆ ಹೊಂದಿಕೊಳ್ಳುವ ರೀತಿಯಲ್ಲಿ ಸಿದ್ಧಾಂತವನ್ನು ರಚಿಸಿಕೊಂಡು ಅದಕ್ಕನುಸಾರ ರಾಜಕೀಯ ಪಕ್ಷವನ್ನು ಕಟ್ಟಿ ರಾಷ್ಟ್ರ ಜೀವನದ ಮುಖ್ಯವಾಹಿನಿಯೊಂದಿಗೆ ಸೇರಲು ಏಕೆ ಪ್ರಯತ್ನಿಸುತ್ತಿಲ್ಲವೆಂಬುದು ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಅವರು ಎಲ್ಲಿಯವರೆಗೆ ಸಂವಿಧಾನದ ಚೌಕಟ್ಟಿನಲ್ಲಿ ಬರುವುದಿಲ್ಲವೊ ಅಲ್ಲಿಯವರೆಗೆ ತಮ್ಮ ಗುರಿಯನ್ನು ಸಾಧಿಸಲಾರರು.

ನಕ್ಸಲೀಯರ ಹೋರಾಟ ಮುಖ್ಯವಾಗಿ ಭೂ ಸಮಸ್ಯೆಯ ಸುತ್ತ, ಭ್ರಷ್ಟಾಚಾರದ ವಿರುದ್ಧ, ವಿಕೇಂದ್ರಿಕೃತ ಬಂಡವಾಳಶಾಹಿ ಆಡಳಿತ ಕುರಿತು ಇದೆ. ಭೂಹೀನರ ಶೋಷಣೆ, ಉಚ್ಚಾಟನೆಗೊಂಡವರ ಪುರ್ನವಸತಿ ಇತ್ಯಾದಿ ಕೆಲ ಜ್ವಲಂತ ಸಮಸ್ಯೆಗಳು ನಕ್ಸಲೀಯರ ಹಿಂಸಾಚಾರಕ್ಕೆ ಕಾರಣವಾಗಿವೆ. ಈ ಎಲ್ಲ ಸಮಸ್ಯೆಗಳೂ ಅಮಾನವೀಯವಾಗಿವೆಯೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಸಮಸ್ಯೆಗಳು ಉದ್ಭವಿಸಿರುವುದು ಸ್ವಕೀಯರದೇ ಆದ ಪ್ರಜಾತಂತ್ರ ಆಡಳಿತ ವ್ಯವಸ್ಥೆಯಲ್ಲಿ. ದುರ್ದೈವದ ಸಂಗತಿಯೆಂದರೆ ಸಕ್ಸಲೀಯರು ತಮ್ಮ ಹಿಂಸಾಪ್ರಧಾನ ಚಟುವಟಿಕೆಗಳನ್ನು

೧೯೬೮ರ ಸುಮಾರಿಗೆ ಪ್ರಾರಂಭಿಸಿದಾಗ ಭಾರತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿತ್ತು ಮತ್ತು ಆ ಸಮಯದಲ್ಲಿಯೆ ವಿನೋಬಾ ಭಾವೆ ಭೂ ಸಮಸ್ಯೆಯ ಪರಿಹಾರಕ್ಕಾಗಿ ಅಹಿಂಸಾತ್ಮಕ ಆಂದೋಲನವನ್ನು ಪ್ರಾರಂಭಿಸಿದ್ದು. ಇದೆಲ್ಲವನ್ನು ನಕ್ಸಲೀಯರು ಮರೆತರು. ೧೯೫೧ರ ಏಪ್ರಿಲ್‌ನಲ್ಲಿ ಒಂದುನೂರು ಎಕರೆ ಭೂಮಿಯನ್ನು ಯಾವ ಹಿಂಸೆಯೂ ಇಲ್ಲದೆ ಪಡೆಯುವುದರ ಮೂಲಕ ತೆಲಂಗಾಣ ಪ್ರದೇಶದಲ್ಲಿ ಶಾಂತಿಯ ಮೂಲಕವೂ, ಅಹಿಂಸೆಯ ಮೂಲಕವೂ ಭೂದಾನ ಯಜ್ಞವನ್ನು ಕೈಗೊಂಡಿದ್ದರೆಂಬ ಸಂಗತಿಯನ್ನು ನಕ್ಸಲೀಯರು ಮತ್ತು ರಾಜ್ಯ ಸರ್ಕಾರಗಳು ಮರೆತದ್ದು ಐತಿಹಾಸಿಕ ದುರಂತವೆಂದೇ ಹೇಳಬಹುದು. ಬಹುಶಃ ಇದಕ್ಕೆ ಕಾರಣ ವಿನೋಬಾ ಭೂ ಸಮಸ್ಯೆಯ ಪರಿಹಾರಕ್ಕಾಗಿ ಹಿಂಸಾ ಮಾರ್ಗವನ್ನು ಅನುಸರಿಸದೆ ಅಹಿಂಸಾಮಾರ್ಗವನ್ನು, ಪ್ರೇಮ–ಕರುಣೆಯ ಮಾರ್ಗವನ್ನು, ಹೃದಯ ಪರಿವರ್ತನೆಯ ಮಾರ್ಗವನ್ನು, ವಿಚಾರಕ್ರಾಂತಿಯ ಮಾರ್ಗವನ್ನು ಅನುಸರಿಸಿದ್ದು. ಮಾವೋ ಸಿದ್ಧಾಂತದಿಂದ ಪ್ರಭಾವಿತರಾಗಿರುವ ನಕ್ಸಲೀಯರಿಗೆ ಒಪ್ಪಿಗೆಯಾಗಲಿಲ್ಲವೆಂದು ತೋರುತ್ತದೆ. ಆದರೆ ಭೂಸಮಸ್ಯೆಯ ಪರಿಹಾರ ಪ್ರಪಂಚದಲ್ಲೆಲ್ಲಿಯೂ ಹಿಂಸೆಯ ಮೂಲಕ ಆಗಿಲ್ಲವೆಂದು ಕಮ್ಯುನಿಸ್ಟರಿಗೆ ತಿಳಿಯದ ವಿಷಯವೇನಲ್ಲ. ಎಂಥ ಉಗ್ರ ಕಮ್ಯುನಿಷ್ಟನೂ ಕಾಲಕ್ರಮೇಣ ಸೌಮ್ಯವಾದಿಯಾದ ಉದಾಹರಣೆಗಳು ಕಮ್ಯುನಿಸ್ಟ್ ಚಳುವಳಿಯಲ್ಲಿಯಲ್ಲಿಯೆ ಹಲವಾರು ಇವೆ. ಅಂಥವರಲ್ಲಿ ಹೆಸರಿಸಬಹುದಾದ ಮುಖ್ಯ ಹೆಸರುಗಳು ಅರವಿಂದ ಘೋಷ್, ಎಂ.ಎನ್ ರಾಯ್, ಜಯಪ್ರಕಾಶ್ ನಾರಾಯಣ್. ಇತಿಹಾಸದಿಂದ ಪಾಠ ಕಲಿಯದಿದ್ದರೆ ಭವಿಷ್ಯದಲ್ಲಿ ತೊಂದರೆಗಳು ತಪ್ಪಿದ್ದಲ್ಲವೆಂಬ ಅನುಭವದ ಮಾತು ನಕ್ಸಲೀಯರಿಗೆ ತಿಳಿಯಬೇಕಾಗಿತ್ತು. ಭಾರತದಲ್ಲಿ ಶಾಂತಿಪೂರ್ವಕ ಭೂಮಿಯ ಸಮಾನ ವಿಭಜನವಾಗದಿದ್ದರೆ ಭಾರತದ ಪ್ರಗತಿಗೆ ತಡೆಯಾಗುತ್ತದೆ; ಕಲ್ಪನೆಗೆ ಮೀರಿದ ದುರ್ದೈವವನ್ನು ಭಾರತ ಎದುರಿಸಬೇಕಾದಿತು ಎಂಬ ಅನಿಸಿಕೆ ವಿನೋಬಾರಿಗೆ ಇತ್ತು. ಅದು ಈಗ ನಿಜವಾಗಿದೆ. ನಕ್ಸಲೀಯರು ತಮ್ಮದೆಂದು ಕೊಳ್ಳುವ ಉದ್ದೇಶ್ಯ ಕುರಿತು ಬದಲಾಗಿರುವ ಇಂದಿನ ಪರಿಸ್ಥಿತಿಯಲ್ಲಿ ವಿಮರ್ಶಾತ್ಮಕ, ಆತ್ಮಶೋಧಕ, ಆಲೋಚನಾತ್ಮಕ ಚಿಂತನೆ ನಡೆಸಿದ್ದಾರೆಯೆ ಹೇಗೆ ಎಂಬ ಬಗ್ಗೆ ಯಾವ ಸುಳಿವೂ ಇಲ್ಲ. ಇದುವರೆಗೆ ನಕ್ಸಲೀಯರ ಬಗ್ಗೆ ದೊರೆತಿರುವ ಸಾಹಿತ್ಯ ಅವರ ಕಾರ್ಯಕರ್ತರೇ ಬರೆದಿಟ್ಟ ಹೋರಾಟದ ದಿನಚರಿ, ಕಾರ್ಯಯೋಜನೆ ಮತ್ತು ಅವರು ಅಧ್ಯಯನ ಮಾಡುವ ಮಾವೋ–ಮಾರ್ಕ್ಸ್ ಸಾಹಿತ್ಯ ಇತ್ಯಾದಿ ಮಾತ್ರ! ನಕ್ಸಲೀಯರಲ್ಲಿ ಹೆಚ್ಚು ಓದಿದವರಿದ್ದಾರೆ. ದೊಡ್ಡ ಹುದ್ದೆಗಳನ್ನು ತ್ಯಜಿಸಿ ಬಂದವರಾಗಿದ್ದಾರೆಂದು ತಿಳಿದು ಬಂದಿದೆ. ೪೦ ವರ್ಷಗಳ ಕಾಲಘಟ್ಟದಲ್ಲಿ ನಕ್ಸಲೀಯರ ವಿಚಾರ ಯಾವುದೇ ರೀತಿಯಲ್ಲಿ ಬದಲಾವಣೆ ಹೊಂದದೆ ಅದೇ ಕನೂ ಸನ್ಯಾಲ್, ನಾಗಭೂಷಣ ಪಟ್ನಾಯಕ್ ಮುಂತಾದ ಕ್ರಾಂತಿ ಪ್ರವರ್ತಕರು ಇಟ್ಟುಕೊಂಡಿದ್ದ ವಿಚಾರಗಳು ಹಾಗೆ ಉಳಿದುಕೊಂಡಿದೆಯೆಂದು ಹೇಳಲು ಸಾಧ್ಯವಿಲ್ಲ. ಒಂದು ವೇಳೆ ವೈಚಾರಿಕ

ಬದಲಾವಣೆಯಾಗಿದ್ದರೆ ಅದನ್ನು ಅವರು ತಮ್ಮ ಅನುಯಾಯಿಗಳ ಮುಂದೆ ಹೇಳಲು ಅವರ ಅಹಂ ಅಡ್ಡ ಬಂದಿರಬಹುದು. ಇಲ್ಲವೆ ಹಿಂಬಾಲಕರು ಉಸಿರುಗಟ್ಟುವ ವಾತಾವರಣದಲ್ಲಿ ಯಂತ್ರವತ್ತಾಗಿ ಹೋರಾಟ ನಡೆಸುತ್ತಿರಬಹುದು. ಮಾನವನ ಅನೇಕ ಚಟುವಟಿಕೆಗಳು; ಇದರಲ್ಲಿ ರಾಜಕೀಯ ಚಟುವಟಿಕೆಗಳೂ ಸೇರಿವೆ-ಹೆಚ್ಚಾಗಿ ಭಾವನಾ ಪ್ರಧಾನವಾಗಿರುತ್ತವೆ. ಆದ್ದರಿಂದ ಇಂದು ಕೋವಿ ಹಿಡಿದಿರುವ ನಕ್ಸಲೀಯ ಯುವಕರ ಮನಸ್ಸಿನಲ್ಲಿ ವಿಚಾರಕ್ಕಿಂತ ಪ್ರಚೋದಕರ ಭಾವನೆ ಕೆಲಸ ಮಾಡುತ್ತಿರಬಹುದು. ಆದ್ದರಿಂದಲೇ ಏನೋ ಆಂಧ್ರ ಪ್ರದೇಶ ಸರ್ಕಾರ ನಕ್ಸಲೀಯರೊಂದಿಗೆ ಇದುವರೆಗೆ ನಡೆಸಿದ ಮಾತುಕತೆಗಳು ವಿಫಲವಾಗುತ್ತಲೆ ಬಂದಿವೆ. ಈ ಮಧ್ಯ ಆಸಕ್ತ ನಾಗರಿಕರ ಸಮಿತಿ (ಸಿ.ಸಿ.ಸಿ.) ಮಾಡಿದ ಪ್ರಯತ್ನಗಳು ಸಹ ದಟ್ಟ ಹೋರಾಟದ ಮಧ್ಯ ಇರುವ ನಕ್ಸಲೀಯರ ಮನಪರಿವರ್ತನೆ ಮಾಡಲು ವಿಫಲವಾಗಿವೆ. ನಕ್ಸಲೀಯರ ಹೋರಾಟಕ್ಕೆ ೪೦ ವರ್ಷಗಳ ನಂತರವೂ ಯಾವುದೇ ಒಂದು ನೆಲೆ ದೊರೆಯದಿರುವುದಕ್ಕೆ ಮತ್ತು ಸರ್ಕಾರವು ಅವರೊಂದಿಗೆ ಒಪ್ಪಂದಕ್ಕೆ ಬರಲು ಸಾಧ್ಯವಾಗದೆ ಇರಲು ಮುಖ್ಯಕಾರಣ ಅವರು ತಮ್ಮ ಹೋರಾಟಕ್ಕೆ ಯಾವುದೇ ಸೈದ್ಧಾಂತಿಕ ನೆಲಗಟ್ಟನ್ನು ಒದಗಿಸದೆ ಇರುವುದು. ನಕ್ಸಲೀಯರು ೧೯೭೭ರಲ್ಲಿ ಭಾರತದ ಕಮ್ಯುನಿಸ್ಟ್-ಲೆನಿನ್ ಪಕ್ಷವೆಂದು ಗುರ್ತಿಸಿಕೊಳ್ಳಲು ಪ್ರಯತ್ನಿಸಿ ಚುನಾವಣೆಯಲ್ಲಿ ಭಾರೀ ಸೋಲನ್ನು ಅನುಭವಿಸಿದ್ದರು. ಹೀಗಾಗಿ ನಕ್ಸಲೀಯರ ಚಟುವಟಿಕೆಗಳನ್ನು ಯಾವುದೇ ಸಿದ್ಧಾಂತಕ್ಕೆ ಅವರಿಗೆ ಅಳವಡಿಸಲಾಗುತ್ತಿಲ್ಲ. ಸಾಮ್ಯವಾದ, ಸಮಾಜವಾದ, ಬಂಡವಾಳಶಾಹಿವಾದ, ಗಾಂಧೀವಾದ ಎಂಬಿತ್ಯಾದಿ ವೈಚಾರಿಕ ವಾದಗಳ ಸರಣಿಗೆ ನಕ್ಸಲ್‌ವಾದ ಸೇರಲಿಲ್ಲವೆಂಬುದೆ ಎಲ್ಲ ಸಮಸ್ಯೆಗಳಿಗೆ ಮೂಲವಾಗಿದೆ. ಆದ್ದರಿಂದ ನಕ್ಸಲೀಯರನ್ನು ಸಮಾಜವು ಭಯದಿಂದ ನೋಡುತ್ತಿದೆ. ಅವರ ಚಳುವಳಿ ಸಾಮಾಜಿಕ ಪರಿವರ್ತನೆಗಾಗಿ ಜನತಾ ಹೋರಾಟವಾಗುವುದರ ಬದಲು ಸೈನ್ಯಾಚರಣೆಯ ಸ್ವರೂಪವನ್ನು ಧಾರಣೆಮಾಡಿದೆ.

ನಕ್ಸಲೀಯರು ಕ್ರಾಂತಿಕಾರರೆಂದು ತಮ್ಮನ್ನು ಬಣ್ಣಿಸಿಕೊಳ್ಳುತ್ತಾರೆ. ಅವರ ದೃಷ್ಟಿಯಲ್ಲಿ ಕ್ರಾಂತಿಕಾರರಾದವರು ತಮ್ಮ ಪಟ್ಟನ್ನು ಯಾವುದೇ ರೀತಿಯಲ್ಲಿ ಸಡಿಲಿಸಲೂ ಕೂಡದು, ಎದುರಾಳಿಯೊಂದಿಗೆ ಒಪ್ಪಂದ ಮಾಡಲೂಕೂಡದು. ಆದರೆ ಅವರ ಈ ಧೋರಣೆ ಅವರು ಒಪ್ಪಿ ಕೊಂಡಿರುವ ನಾಯಕರ ಧೋರಣೆಗೆ ವಿರೋಧವಾಗಿದೆ. ಒಪ್ಪಂದ ಮಾಡಲೂ ಕೂಡದು ಆದರೆ ಅವರ ಈ ಧೋರಣೆ ಅವರು ಒಪ್ಪಿಕೊಂಡಿರುವ ನಾಯಕರ ಧೋರಣೆಗೇ ವಿರುದ್ಧವಾಗಿದೆ. ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಲೆನಿನ್ ಹೇಳಿರುವ ಮಾತನ್ನು ನಾವು ಗಮನಿಸೋಣ "ಬೋಲ್ಸೆವಿಕ್ಸ್‌ರು ಯಾರೊಂದಿಗೂ ಒಪ್ಪಂದಕ್ಕೆ ಬರುವುದಿಲ್ಲ. ಕ್ರಾಂತಿಕಾರರಾಗಿರುವ ನಮಗೆ ಈ ಮಾತು ಪುಳಕಿತಗೊಳಿಸುತ್ತದೆ. ಆದಾಗ್ಯೂ ಈ ವಿಚಾರ ತಪ್ಪೆಂದು ನಾವು ಹೇಳಲೇಬೇಕು." ನಕ್ಸಲೀಯರ ಇನ್ನೋರ್ವ ಗುರುವಾದ ಏಂಜಿಲ್‌ರು ೧೮೭೩ರಲ್ಲಿ

ಈ ರೀತಿ ಹೇಳಿದ್ದರು, "ಒಪ್ಪಂದಗಳನ್ನು ಸಾರಾಸಗಟಾಗಿ ನಿರಾಕರಿಸುವುದು ಹುಚ್ಚುತನ!" ಹೈದರಾಬಾದಿನಲ್ಲಿರುವ ಮಾರ್ಕ್ಸ್ ಪಂಥೀಯ ಅಧ್ಯಯನ ಸಂಸ್ಥೆಯ ಸಂಚಾಲಕರಾದ ಎಲ್. ಮಲ್ಲಿಕಾರ್ಜುನ ಶರ್ಮ ತಮ್ಮ ಇತ್ತೀಚೆಗಿನ ಲೇಖನವೊಂದರಲ್ಲಿ (೨೦೦೨) ಹೀಗೆ ಬರೆದಿದ್ದಾರೆ. "ಎಲ್.ಟಿ.ಟಿ.ಇ.ಯ ಪ್ರಭಾಕರನ್ ಮತ್ತು ಪಿ.ಎಲ್.ಓ.ದ ಅರಾಫತ್ ತಮ್ಮ ಕಡು ವೈರಿಗಳ ಜೊತೆಗೆ ಒಪ್ಪಂದದ ಮಾತನ್ನಾಡುತ್ತಿರುವಾಗ ನಕ್ಸಲೀಯರು ಆಯಾ ರಾಜ್ಯ ಸರ್ಕಾರಗಳೊಂದಿಗೆ ಒಪ್ಪಂದದ ಮಾತನ್ನಾಡದಿರಲು ಕಾರಣವಿರಬಾರದು.

ಇಂದಿನ ನಕ್ಸಲೀಯರಿಗೆ ವಿನೋಬಾ ನಡೆಸಿದ ಭೂದಾನ ಯಜ್ಞ ಆಂದೋಲನ ಮಹತ್ವದ್ದೆನಿಸದೆ ಇರಬಹುದು. ಆದರೆ ನಕ್ಸಲೀಯರು ೪೦ ವರ್ಷಗಳಲ್ಲಿ ಸಾಧಿಸಲಾಗದಿರುವುದನ್ನು ವಿನೋಬಾ ಶಾಂತಿಯಿಂದಲೂ, ಅಹಿಂಸೆಯಿಂದಲೂ ಒಂಟಿಯಾಗಿ ೬ ವರ್ಷಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ವಿನೋಬಾರ ಸಾಧನೆ ಸೂರ್ಯನ ಬೆಳಕಿನಷ್ಟೆ ಸ್ಪಷ್ಟವಾಗಿದೆ, ಸಾಕ್ಷಿಯಾಗಿದೆ. ಆದರೆ ನಕ್ಸಲೀಯರು ವಿನೋಬಾರ ಮಾರ್ಗವನ್ನು ಅನುಸರಿಸಲು ಅಥವಾ ವಿನೋಬಾ ಮತ್ತು ಗಾಂಧೀಯವರ ಕೆಲಸವನ್ನು ಪೂರ್ತಿಗೊಳಿಸಲು ಹಿಂಜರಿಯುತ್ತಿದ್ದಾರೆ. ಅವರಿಗೆ ಇನ್ನೂ ಮಾರ್ಕ್ಸ್–ಲೆನಿನ್–ಮಾವೋರ ಸಿದ್ಧಾಂತಗಳ ಬಗೆಗಿನ ಭ್ರಮೆ ನಿರಸನವಾಗಿಲ್ಲ. ಈ ಭ್ರಮೆ ಸಾಮಾಜಿಕ ಕ್ರಾಂತಿಕಾರಿಗಳಿಗೆ ತರವಲ್ಲವೆಂಬ ಮಾತು ಮಾರ್ಕ್ಸ್–ಲೆನಿನ್ ಪಥದಲ್ಲಿ ಬಹುದೂರ ಸಾಗಿ ಬಂದಿದ್ದ ಎಮ್–ಎನ್.ರಾಯ್ ೧೯೪೬ರಲ್ಲಿ ಡೆಹಾರಾಡೂನ್‌ನಲ್ಲಿ ನಡೆದ ರಾಜಕೀಯ ಶಿಬಿರದಲ್ಲಿ ಮಾತನಾಡುತ್ತಾ ಹೇಳಿದ ಈ ಮಾತುಗಳನ್ನಾದರೂ ನಕ್ಸಲೀಯರು ಆಲಿಸಿದರೆ ಅವರ ಇಂದಿನ ಮನೋಭೂಮಿಕೆಯಲ್ಲಿ ಬದಲಾಗುವ ಸಾಧ್ಯತೆ ಉಂಟಾಗಬಹುದೇನೋ. "ಒಂದು ವೇಳೆ ಈಗ ಮಾರ್ಕ್ಸ್ ನಮ್ಮ ನಡುವೆ ಬಂದುದೇ ಆದರೆ ನಾನು ನೂರು ವರ್ಷಗಳ ಹಿಂದೆಹೇಳಿದ ಮಾತುಗಳು ಇಂದು ಅನ್ವಯಿಸುವುದಿಲ್ಲವಾದ್ದರಿಂದ ಅವುಗಳನ್ನು ನಿರಾಕರಿಸಬೇಕು." ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ ಮಾರ್ಕ್ಸ್‌ನ ಮಾತುಗಳಿಗೆ ಅನ್ವಯಿಸುವ ಆ ಮಾತುಗಳು ಗಾಂಧೀ–ವಿನೋಬಾ–ಜೆ.ಪಿ.ಯವರ ಮಾತಿಗೆ ಅನ್ವಯಿಸುವುದಿಲ್ಲ ವೆಂಬುದು. ಈ ಮೂವರೂ ಚಿಂತಕರು ಪ್ರಧಾನವಾಗಿ ಹೇಳಿದ ಮಾತು ಗ್ರಾಮ ಸ್ವರಾಜ್ಯದ್ದು, ಗ್ರಾಮ ಗಣರಾಜ್ಯದ್ದು. ದೇಶದ ಎಲ್ಲ ಗ್ರಾಮಗಳು ಗಣರಾಜ್ಯಗಳಾಗಿ ಪರಿವರ್ತಿತಗೊಂಡು ಅವುಗಳಲ್ಲಿ ಸ್ವರಾಜ್ಯದ ಸ್ಥಾಪನೆಯಾದರೆ ದೇಶದ ಇಂದಿನ ಗಣರಾಜ್ಯ ವ್ಯವಸ್ಥೆಯ ಮೇಲೆ ಕಳೆದ ೪೦ ವರ್ಷಗಳಿಂದ ಉಂಟಾಗಿರುವ ನಕ್ಸಲೀಯ ರೂಪದಲ್ಲಿಯ ವ್ರಣವು ವಾಸಿಗೊಂಡು ನಮ್ಮ ದೇಶ ವಿಶ್ವದಲ್ಲಿಯೇ ಮಾದರಿ ಪ್ರಜಾಸತ್ತಾತ್ಮಕ ಸಮಾಜವಾದಿ ಗಣರಾಜ್ಯವಾಗುವುದು.

ವಿನೋಬಾ ಯಾವ ವಿಚಾರದಲ್ಲೂ ನಕ್ಸಲೀಯರಿಗಿಂತ ಕಡಿಮೆ ಕ್ರಾಂತಿಕಾರರಾಗಿರಲಿಲ್ಲ. ಅವರ ಕ್ರಾಂತಿ ದೃಷ್ಟಿ ಈ ಮಾತುಗಳಲ್ಲಿ ಪ್ರತಿಧ್ವನಿಸುತ್ತದೆ "ಯಾರಿಗೆ ಯಾವ ನೆಲ

ಬೇಕೋ ಅದನ್ನವರಿಗೆ ಕೊಡಬೇಕು. ಇಲ್ಲವಾದರೆ ಸರ್ವನಾಶ ಖಂಡಿತ. ಸಮಾಜವಾಗಲು ಸಮಾಜಶೀಲತೆ ಬೇಕು. ಸಮಾಜಶೀಲತೆಗೆ ಸಮಾನಶೀಲತೆ ಬೇಕು. ಸಮಾನತೆಯುಳ್ಳವರದೇ ಸಮಾಜವಾಗಬಲ್ಲದು.'' "ಸಿಂಹ –ಆಡುಗಳು ಕೂಡಿ ಇರಬಲ್ಲವು. ಯಾವಾಗ? ಸಿಂಹದ ಹೊಟ್ಟೆಯೊಳಗೆ ಆಡು ಇದ್ದಾಗ.'' " ಇಲ್ಲಿ ದ್ರಾವಿಡ ಕಜಗಂ ವಿರುದ್ಧ, ನಾಸ್ತಿಕರ ವಿರುದ್ಧ ಕೆಲವು ಮಾತುಗಳನ್ನು ಕೇಳಿದೆ. ಈಗ ಎಲ್ಲರೂ ಭೂಮಿಹೀನರಿಗೆ ಭೂಮಿ ಕೊಡುವ ಕೆಲಸ ಮಾಡಿ. ಆಮೇಲೆ ಯಾವ ಕಜಗಂ ಕೆಲಸ ಮಾಡೀತೊ, ಯಾವ ನಾಸ್ತಿಕ ಎದುರಿಗೆ ಬಂದಾನೋ ನೋಡುತ್ತೇನೆ.''ಭೂದಾನ ಯಜ್ಞ ಬರೀ ಭೂಮಿ ಹಂಚಿಕೆಯ ಚಳುವಳಿ ಎನ್ನಬೇಡಿ. ಪ್ರೇಮವನ್ನು ಸಮೃದ್ಧಗೊಳಿಸುವ ಚಳುವಳಿ ಇದು. ವಿನೋಬಾರ ಪ್ರಕಾರ ಸಾಗುವಳಿಗೆ ಯೋಗ್ಯವಾದ ಭೂಮಿ ೩೦ ಕೋಟಿ ಎಕರೆ ಇದೆ. ಅದರಲ್ಲಿ ೧/೬ ಭಾಗ ಅಂದರೆ, ೫ ಕೋಟಿ ಎಕರೆ ಭೂಮಿ ಭೂಹೀನರ ಕೈಗೆ ಹೋದರೆ ಭೂ ಸಮಸ್ಯೆ ಪರಿಹಾರವಾದೀತು. ಈ ಮಾತಿನಂತೆ ಕಾರ್ಯಸಾಧನೆ ಮಾಡಲು ವಿನೋಬಾ ೧೯೫೧ ಏಪ್ರಿಲ್ ತಿಂಗಳಿನಲ್ಲಿ ತೆಲಂಗಾಣದಲ್ಲಿ ಭೂದಾನ ಯಾತ್ರೆಪ್ರಾರಂಭಿಸಿದರು. ನಕ್ಸಲೀಯರು ಅನೇಕ ಭೂಮಾಲೀಕರ ಹತ್ಯೆ ಮಾಡಿದ್ದರು. ಎರಡು ವರ್ಷಗಳಲ್ಲಿ ೨೦ ಜನರ ಕೊಲೆಯಾಗಿತ್ತು. ಆ ಪ್ರದೇಶದಲ್ಲಿ ಎರಡು ತಿಂಗಳ ಯಾತ್ರೆ ಮಾಡುವ ಹೊತ್ತಿಗೆ ವಿನೋಬಾರ ಮಾತಿಗೆ ಗೌರವ ಕೊಟ್ಟು ಭೂಮಾಲೀಕರು ೧೮,೦೦೦ ಎಕರೆ ಭೂಮಿಯನ್ನು ದಾನವಾಗಿ ಕೊಟ್ಟರು. ಪ್ರತಿಯೊಂದು ಹಳ್ಳಿಯಲ್ಲಿ ಒಂದು ಭೂಮಿಹೀನ ಕುಟುಂಬಕ್ಕೆ ಐದು ಎಕರೆ ಸಿಗಬೇಕಾದರೆ ೨೫ ಲಕ್ಷ ಎಕರೆ ಭೂಮಿ ಅನಿವಾರ್ಯವಾಗಿ ಬೇಕೆಂದು ಲೆಕ್ಕಹಾಕಿದರು. ಈಗ ಯಾವ ಯಾವ ರಾಜ್ಯಗಳಲ್ಲಿ ನಕ್ಸಲೀಯರು ಚುರುಕಾಗಿದ್ದಾರೋ ಆ ಎಲ್ಲ ರಾಜ್ಯಗಳಲ್ಲೂ ವಿನೋಬಾ ಭೂಮಿಯನ್ನು ದಾನವಾಗಿ ಪಡೆದು ಭೂಹೀನ ರೈತರಿಗೆ ಹಂಚಿದರು. ೧೯೫೭ ನೇ ಇಸವಿಯೊಳಗೆ ದೇಶದ ಕೃಷಿಯೋಗ್ಯ ಭೂವಿಯ ೧/೨ ಭಾಗವಾದ ೫ ಕೋಟಿ ಎಕರೆ ಭೂಮಿಯನ್ನು ದಾನವಾಗಿ ಸಂಗ್ರಹಿಸಲು ವಿನೋಬಾ ತೀರ್ಮಾನಿಸಿದರು. ಯಾವ ಆಂಧ್ರಪ್ರದೇಶದಲ್ಲಿ ನಕ್ಸಲೀಯರ ಸಮಸ್ಯೆ ಉಗ್ರವಾಗಿದೆಯೆಂದು ಭಾವಿಸಲಾಗಿದೆಯೊ ಅದೇ ಆಂಧ್ರಪ್ರದೇಶದಲ್ಲಿ ಮೂರು ತಿಂಗಳಿಗಿಂತ ಹೆಚ್ಚು ಕಾಲ ಪಾದಯಾತ್ರೆ ಮಾಡಿ ೬೩,೦೦೦ ಎಕರೆ ಭೂದಾನ, ಒಂದು ಲಕ್ಷ ರೂಪಾಯಿ ಸಂಪತ್ತಿದಾನ ಪಡೆದರು. ಇದೆಲ್ಲವು ಕೋವಿಯ ಬಲದಿಂದಲ್ಲ, ಆತ್ಮಶಕ್ತಿಯ ಬಲದಿಂದಾದುದು. ೧೯೫೬ ರ ಕೊನೆಯ ವೇಳೆಗೆ ಇಡಿ ಭಾರತದಲ್ಲಿ ೪೧ ಲಕ್ಷ ಎಕರೆ ಭೂಮಿ ದಾನವಾಗಿ ದೊರೆಯಿತು. ಒಟ್ಟಿನಲ್ಲಿ "ಹಿರೋಷಿಮಾದಲ್ಲಿ ಅಣುಬಾಂಬ್ ಬಿದ್ದಾಗ ಏನಾಯಿತೋ ನನ್ನ ಮಾತಿನಿಂದ ಅಂಥ ಪರಿಣಾಮವಾಯಿತು'' ಎಂಬುದಾಗಿ ವಿನೋಬಾ ಹೇಳಿದ್ದಾರೆ. ಭೂದಾನ ಯಜ್ಞದ ಐತಿಹಾಸಿಕ ಘಟನೆಯನ್ನು ನಕ್ಸಲೀಯರು ಅರ್ಥ ಮಾಡಿಕೊಂಡು ತಮ್ಮ ಶಸ್ತ್ರಗಳನ್ನು ಕೆಳಗಿರಿಸಿ ಸಾಮಾಜಿಕ, ಅಹಿಂಸಕ ಕಾರ್ಯಕರ್ತರಾಗಿ ನವಭಾರತದ ನವನಿರ್ಮಾಣಕ್ಕೆ ಮುಂದೆ ಬರಲಿ.

ಸಂಸ್ಕೃತಿಯ ವಿಕಾಸದ ಪಡಿನೆಳಲೇ ಕಲೆ.

–ಕೆ. ಕೆ. ಹೆಬ್ಬಾರ್

(ಮೈಸೂರು ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ೧೯೬೯ರಲ್ಲಿ ನೀಡಲಾದ ಎರಡು ಭಾಷಣಗಳ ಸಂಯುಕ್ತ ವಿಷಯವನ್ನು ಇಲ್ಲಿ ಮರು ಪ್ರಕಟಿಸಲಾಗಿದೆ.)

ಮೊಟ್ಟ ಮೊದಲಿಗೆ ನಾನು ಮೈಸೂರು ವಿಶ್ವವಿದ್ಯಾಲಯಕ್ಕೆ ಆಭಾರಿಯಾಗಿದ್ದೇನೆ. ಕಲೆಯ ಹುಟ್ಟು ಮತ್ತದರ ಬೆಳವಣಿಗೆಯನ್ನು ವಿವರಿಸಿಕೊಳ್ಳಲು ನಾನು ಈ ಅವಕಾಶವನ್ನು ಉಪಯೋಗಿಸುತ್ತೇನೆ.

ಕಲೆಯು ಯಾತಕ್ಕಾಗಿ, ಯಾವ ಉದ್ದೇಶಕ್ಕಾಗಿ ಮತ್ತು ಹೇಗೆ ಉದಯವಾಯಿತು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳಲು ನಾವು ಪ್ರಯತ್ನ ಮಾಡೋಣ.

ಮನುಷ್ಯನು ಗುಹೆಗಳಲ್ಲಿದ್ದಾಗ ತನಗೊಂದು ನೆರಳನ್ನು ಹುಡುಕಿಕೊಳ್ಳುವುದಕ್ಕಷ್ಟೇ ಅವನ ಅವಶ್ಯಕತೆ ಸೀಮಿತವಾಗಿತ್ತು. ಹಸಿವು–ನೀರಡಿಕೆಗಳನ್ನು ನೀಗಿಸಿಕೊಳ್ಳುವುದು ಮತ್ತು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವುದಷ್ಟೆ ಅವನ ಜೀವನವಾಗಿತ್ತು. ಮುಖ್ಯ ಉದ್ಯೋಗವೇ ಬೇಟೆಯಾಡುವುದು. ಹಸಿವು ನೀರಡಿಕೆಗಳಂಥ ದಿನನಿತ್ಯದ ಅಗತ್ಯಗಳು ಪೂರೈಕೆ ಆಗುತ್ತಲೂ ಆತನು ತನ್ನ ಸಂತೋಷ ದುಃಖ ಮುಂತಾದ ಅನುಭವಗಳನ್ನು ಹಂಚಿಕೊಳ್ಳಲು ಬಯಸಿದ. ಮೊದಲು ಅವನು ನೀರು ಕುಡಿಯುತ್ತಿದ್ದುದು ಪ್ರಾಣಿಗಳಂತೆ ನೆಕ್ಕಿ. ನಂತರ ತನ್ನೆರಡು ಬೊಗಸೆಗಳಿಂದ ನೀರನ್ನೆತ್ತಿ ಬಾಯಿಯ ಹತ್ತಿರ ತಂದ. ಮುಂದೆ ಮಣ್ಣಿನ ಕುಡಿಕೆಗಳ ಆವಿಷ್ಕಾರಕ್ಕೆ ಇದೇ ನಾಂದಿಯಾಯಿತು. ಮಣ್ಣಿನ ಕುಡಿಕೆಗಳನ್ನು ಸುಟ್ಟು ಗಟ್ಟಿ ಮಾಡಲಾಯಿತು. ತಾನೇ ಕೈಯಿಂದ ಒಂದು ವಸ್ತುವನ್ನು ಮಾಡತೊಡಗುತ್ತಲೇ ಅದನ್ನು ಸುಂದರವಾಗಿ ಮಾಡಬೇಕೆಂಬ ಪ್ರಜ್ಞೆಯೂ ಅವನಲ್ಲಿ ಜಾಗೃತವಾಗಿರಬೇಕು. ಮಡಿಕೆಗಳ ಸುತ್ತ ಗೆರೆ ಎಳೆದು ಅದರ ಮೇಲೆ ಚಿತ್ತಾರ ಬಿಡಿಸುವ ಪ್ರಯತ್ನ ನಡೆಯಿತು. ಹೀಗೆ ಮಾಡುತ್ತಾಹೋದಂತೆ ಒಂದು ನೇರಗೆರೆ, ಒಂದು ವಕ್ರ ರೇಖೆಯನ್ನು ಮತ್ತೆ ಮತ್ತೆ ಮೂಡಿಸಿದಾಗ ಅದರಲ್ಲಿ ಒಂದು ಏಕತಾನತೆ ಅಥವಾ ಒಂದು ಚಿತ್ರ ಆಗುವುದೆಂಬ ಅರಿವು ಬಂತು. ಈ ರೀತಿಯಲ್ಲಿ ಮಾಡಿದ ಮಡಿಕೆಯು

ಉಪಯುಕ್ತವೂ, ನೋಡಲಿಕ್ಕೆ ಚೆಂದವೂ ಆಗಿರುವುದನ್ನು ಕಂಡ. ಅಲ್ಲಿಂದ ಮನುಷ್ಯನ ಸೌಂದರ್ಯಾರಾಧನೆ ಆರಂಭವಾಯ್ತು.

ಸುಂದರ ವಸ್ತುಗಳ ಬಗ್ಗೆ ಪ್ರೀತಿ ಹೆಚ್ಚಿದಂತೆ ವಿವಿಧ ಬಣ್ಣದ ಮಣ್ಣನ್ನು ತಂದು ತಾನು ನಿತ್ಯ ಉಪಯೋಗಿಸುವ ವಸ್ತುಗಳನ್ನೂ, ತನ್ನ ಮನೆಯನ್ನೂ ಶೃಂಗರಿಸತೊಡಗಿದ. ಅವನೊಳಗಿನ ಸೌಂದರ್ಯಪ್ರಜ್ಞೆ ಜಾಗೃತವಾದಂತೆ ಮನುಷ್ಯನು ತನ್ನ ಸುತ್ತಮುತ್ತಲಿನ ಪ್ರಾಣಿಗಳಿಗಿಂತ ಸ್ವಲ್ಪ ಸ್ವಲ್ಪವೇ ಮೇಲೇರತೊಡಗಿದ.

ಕಾಡುಪ್ರಾಣಿಗಳ ಬೇಟೆಯು ಅವನಿಗೆ ರೋಚಕ ಅನುಭವಗಳನ್ನು ತಂದುಕೊಡುತ್ತಿದ್ದಿರಬೇಕು. ಜಿಂಕೆಯ ಗತ್ತು, ಓಡುವ ಕುದುರೆಯ ವೈಯಾರ ಇವುಗಳಿಂದ ಮುದಗೊಳ್ಳುತ್ತಿದ್ದ. ಪ್ರಾಣಿಗಳೊಂದಿಗಿನ ಸೆಣಸಾಟವು ಅವನಲ್ಲಿರುವ ಪೌರುಷಕ್ಕೆ ಸವಾಲಾಗಿರಬೇಕು. ಈ ಎಲ್ಲವನ್ನು ನೋಡಿ, ಅನುಭವಿಸಿ ಗುಹೆಗೆ ಹಿಂತಿರುಗಿದ ನಂತರ ಅವುಗಳ ಬಗ್ಗೆಯೇ ವಿಚಾರ ಮಾಡಿ, ಗುಹೆಗಳ ಗೋಡೆಗಳ ಮೇಲೆ ಅದರ ಚಿತ್ರಗಳನ್ನು ಬರೆದು ವಿವಿಧ ಬಣ್ಣದ ಮಣ್ಣಿನಿಂದ ರಂಗು ತುಂಬಿ ತನ್ನ ಕಲ್ಪನೆಗಳಿಗೆ ರೂಪು ಕೊಡುತ್ತಿದ್ದ. ಆತನ ಚಿತ್ರಗಳಲ್ಲಿ ಪ್ರಾಣಿಗಳ ಯಥಾವತ್ ರೂಪಿಗಿಂತ ಅವುಗಳ ಗುಣವೈವಿಧ್ಯಗಳೇ ಪ್ರಮುಖವಾಗಿದ್ದವು. ಚಿಗರೆಗಳ ಗತ್ತು, ಆನೆಗಳ ಬಲ, ಸಿಂಹದ ರಾಜಗಾಂಭೀರ್ಯ ಇವನ್ನೆಲ್ಲ ರೇಖೆಗಳಿಂದಲೂ, ಬಣ್ಣ ವೈವಿಧ್ಯಗಳಿಂದಲೂ ಪ್ರತಿಬಿಂಬಿಸುತ್ತಿದ್ದ. ಈ ಮೂಲಕ ತನ್ನೊಳಗಿನ ಒತ್ತಡವನ್ನು ಹೊರಹಾಕುತ್ತಲೂ ಇದ್ದ ಮತ್ತು ಸಂಗಡಿಗರೊಂದಿಗೆ ತಾನು ನೋಡಿದ ಅನುಭವಗಳನ್ನು ಹಂಚಿಕೊಳ್ಳುತ್ತಲೂ ಇದ್ದ. ಹೀಗೆ ತನ್ನದೇ ಆದರೀತಿಯಲ್ಲಿ ತನ್ನ ಸಾಮಾಜಿಕ ಜವಾಬ್ದಾರಿಯನ್ನಾತ ನಿಭಾಯಿಸುತ್ತಿದ್ದ. ಪ್ರಾಣಿಗಳಲ್ಲಿ ಒಂದಾಗಿ ಜೀವನಮಾಡುತ್ತಿದ್ದವ ತನ್ನ ಸೌಂದರ್ಯ ಪ್ರಜ್ಞೆಯಿಂದಾಗಿ ಬದಲಾವಣೆಗೊಂಡು ಹೆಚ್ಚು ಹೆಚ್ಚು ನಾಗರಿಕತೆಯತ್ತ ಒಲಿಯುತೊಡಗಿದ. ಗವಿಯಲ್ಲಿ ವಾಸಿಸುತ್ತಿದ್ದ ಮನುಷ್ಯರಲ್ಲೂ ಕೆಲವರು ತಮಗರಿವಿಲ್ಲದೆಯೇ ಕಲಾವಿದರಾದರು. ತಮ್ಮ ಕಲಾಕೃತಿಗಳನ್ನು ಮುಂದಿನ ಪೀಳಿಗೆಯವರು ನೋಡಿ ಮೆಚ್ಚಬಹುದೆಂಬ ಕಲ್ಪನೆ, ನಿರೀಕ್ಷೆ ಇಲ್ಲದೆಯೇ ಕಲಾವಿದರಾದರು. ಮನುಷ್ಯನು ಅತಿ ಹೆಚ್ಚು ಉತ್ತೇಜಿತನಾಗಿದ್ದಾಗ ಅವನೊಳಗಿದ್ದ ನಿಜವಾದ ಕಲೆಯು ಅಭಿವ್ಯಕ್ತಗೊಂಡಿತು. ಹೆಚ್ಚು ಆರಾಮದಾಯಕವಾಗಿರಬೇಕು, ನೋಡಲು ಸುಂದರವಾಗಿರಬೇಕು ಎಂಬ ಅರಸುವಿಕೆಯಲ್ಲಿ ಕಟ್ಟಿದ ಹೊಸ ಮಾದರಿಯ ನಿವಾಸಗಳು ಮುಂದೆ ಕಲಾಕೌಶಲ್ಯದ ಮಾದರಿಗಳೆನಿಸಿದವು. ಹುಟ್ಟು ಸಾವಿನ ಕುರಿತಾದ ಕುತೂಹಲಗಳು, ನೈಸರ್ಗಿಕವಾಗಿ

ಸಂಭವಿಸುವ ಘಟನೆಗಳ ಬಗ್ಗೆ ಇದ್ದ ಕೌತುಕ ಧರ್ಮದ ಹುಟ್ಟಿಗೆ ಕಾರಣವಾದವು. ಚಿತ್ರಕಲೆಯಲ್ಲಿ ಸಿದ್ಧಹಸ್ತರೆನಿಸಿದವರನ್ನು, ಕರಕುಶಲ ಕಲೆಗಳಲ್ಲಿ ಪಾರಂಗತರಾದವರನ್ನು ಕೆತ್ತನೆಯಲ್ಲಿ, ಪರಿಣಿತರೆನಿಸಿದವರನ್ನು ಧಾರ್ಮಿಕ ಮುಂದಾಳುಗಳು ತಮ್ಮ ಆರಾಧನಾ ಕ್ಷೇತ್ರಗಳನ್ನು ಕಟ್ಟುವುದಕ್ಕೆ, ಸುಂದರಗೊಳಿಸುವುದಕ್ಕೆ ನೇಮಿಸಿಕೊಂಡರು. ಈ ಮೂಲಕ ಧರ್ಮ ಪ್ರಸಾರವೂ ಆಯಿತು. ಇಂಥ ಧಾರ್ಮಿಕ ಕಲೆ ಹಳೆ ದೇವಾಲಯ, ಚರ್ಚು, ಮಸೀದಿಗಳಲ್ಲಿ ಕಂಡುಬರುತ್ತವೆ. ಆಗಿನ ಕಾಲದಲ್ಲಿ ನಿರ್ದಿಷ್ಟ ಕಲಾಶಾಲೆಗಳೇನೂ ಇರದಿದ್ದರೂ ಕಲಾವಿದರೇ ಗುಂಪಾಗಿ ತಾವೇ ತಮಗೆ ಕೆಲವು ನಿಯಮಗಳನ್ನೂ ಮಾರ್ಗದರ್ಶಕ ಸೂತ್ರಗಳನ್ನೂ ಹಾಕಿಕೊಂಡರು. ಮೊದಮೊದಲಿಗೆ ಕಲಾವಿದರು ದೇವರು-ದೇವತೆಗಳನ್ನು, ಭಕ್ತಾದಿಗಳನ್ನು ವರ್ಣಿಸಲು ಒಂದು ಮಾದರಿಯನ್ನು ಹಾಕಿಕೊಂಡರು. ಕಾಲಾನಂತರ ರಾಜರು ಮತ್ತು ಪಂಡಿತರು ಧಾರ್ಮಿಕ ಮುಖಂಡರಿಗಿಂತ ಹೆಚ್ಚಿನವರೆನಿಸಿಕೊಂಡರು. ತಮ್ಮ ವೈಭವವನ್ನು , ತಮ್ಮ ಹೆಚ್ಚುಗಾರಿಕೆಯನ್ನು ಮೆರೆಸಲಿಕ್ಕೆ ಕಲಾವಿದರನ್ನು ರಾಜಾಸ್ಥಾನಗಳಿಗೆ ಕರೆಸಿ ಅವರ ಸೇವೆಯನ್ನು ಬಳಸಲಾಯ್ತು. ಶ್ರೀಮಂತರ ಮನೆಗಳ ಗೋಡೆಗಳನ್ನು ಅಲಂಕರಿಸುವುದಕ್ಕೆ ನಿಸರ್ಗದ ಬೇರೆ ಬೇರೆ ರೂಪಗಳನ್ನು ಸೆರೆಹಿಡಿದು ಶೃಂಗರಿಸಲಾಯ್ತು. ಬಣ್ಣದ ಕಲಾವಿದರು ಅಥವಾ ಕೆತ್ತನೆಯ ಕಲಾವಿದರು ತಮ್ಮ ಅನ್ನದಾತರ ಯಥಾವತ್ ಚಿತ್ರವನ್ನೋ, ಪ್ರತಿಮೆಯನ್ನೋ ತಯಾರಿಸುವಲ್ಲಿ ಅಥವಾ ನಿಸರ್ಗವನ್ನು ಯಥಾವತ್ ಕುಂಚದಲ್ಲಿ ಇಳಿಸುವಲ್ಲಿ ನಿಷ್ಣಾತರೆನಿಸಬೇಕಾಗಿತ್ತು. ಹೀಗೆ ತನಗನಿಸಿದ್ದನ್ನು ತನ್ನ ಭಾವನೆಗಳನ್ನು ಚಿತ್ರಿಸುತ್ತಿದ್ದ ಕಲಾವಿದ ತನ್ನ ಆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತ ಹೋದ.

೧೫ ರಿಂದ ೧೯ ನೇ ಶತಮಾನಗಳ ಮಧ್ಯದಲ್ಲಿ ಯುರೋಪಿನಲ್ಲಿ ಸಾವಿರಾರು ಅತ್ಯುತ್ತಮ ಕಲಾಕೃತಿಗಳು ಹೊರಬಂದವು. ಅದಕ್ಕೆ ತಕ್ಕಂತೆ ಅವರಿಗೆ ಸನ್ಮಾನ ಗೌರವಗಳು ಸಂದವು. ಕಲಾ ಅಭಿವ್ಯಕ್ತಿಯು ಒಂದು ತುದಿಯನ್ನು ಮುಟ್ಟಿದಾಗ ಅಲ್ಲಿಯೂ ಕ್ರಾಂತಿಯಾಯಿತು. ೧೮ನೇ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚ್ ಕ್ರಾಂತಿಯ ಪರಿಣಾಮವಾಗಿ ಸಾಮಾಜಿಕ ಜೀವನದಲ್ಲಿ ಮೂಲಭೂತ ಬದಲಾವಣೆಗಳಾದಾಗ ಅದು ಜನರ ಮೇಲೂ, ಕಲಾವಿದರ ಮೇಲೂ ಅಗಾಧ ಪರಿಣಾಮ ಬೀರಿತು.ನಿಜವಾದ ಕಲಾವಿದರು ತಮಗೊಬ್ಬ ಪೋಷಕ ಬೇಕೆಂಬುದನ್ನು ಬಿಟ್ಟು ಬದಲಿಗೆ ಸೌಂದರ್ಯ ಪ್ರಜ್ಞೆ ಇರುವ ಜನಸಾಮಾನ್ಯರನ್ನೇ ತಮ್ಮ ಕಲಾ ಪೋಷಕರನ್ನಾಗಿ ಮಾಡಿಕೊಂಡರು. ಈಗ ಮತ್ತೊಮ್ಮೆ ಕಲಾವಿದರು ನಿಜವಾದ ಸೃಜನಾತ್ಮಕ ಕಲಾಕಾರಿಕೆಯಲ್ಲಿ ತೊಡಗಿಕೊಂಡು ಕಲೆಯನ್ನು ಸಾಮಾಜಿಕ,

ಧಾರ್ಮಿಕ ಮುಲಾಜುಗಳಿಂದ ಮುಕ್ತಗೊಳಿಸುವ ಕುರಿತು ಚಿಂತಿಸತೊಡಗಿದರು. ಹಾಗೆಯೇ ಯಥಾವತ್ ಚಿತ್ರಗಳ ತಯಾರಿಕೆಯಿಂದಲೂ ದೂರಸರಿಯತೊಡಗಿದರು. ೧೯ನೇ ಶತಮಾನದ ಕೊನೆಯಲ್ಲಿ ಈ ರೀತಿಯ ಸೃಜನಾತ್ಮಕ ಕಲೆಯ ಕೇಂದ್ರವಾಗಿ ಪ್ಯಾರಿಸ್ ತಲೆ ಎತ್ತಿ ನಿಂತಿತು. ಬಣ್ಣಗಳ ವಿಶ್ಲೇಷಣೆಯತ್ತ ಕಲಾವಿದರು ಒಲಿಯತೊಡಗಿದರು.

ಪರಸ್ಪರ ಹೊಂದಿಕೆಯಾಗುವ ಬಣ್ಣಗಳನ್ನು ತೆಳುವಾಗಿ ಮತ್ತು ದಟ್ಟವಾಗಿ ಬಳಸುವ ಮೂಲಕ ಭೌತಿಕ ಅನುಭವಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಬಹುದೆಂಬ ಕಲ್ಪನೆ ಜೀವತಳೆದದ್ದು ಆಗ. ಬೆಳಕೆಂದರೆ ಬಿಳಿಯಲ್ಲ. ನೆರಳೆಂದರೆ ಕಪ್ಪಲ್ಲ. ಒಂದು ಪಟಕದ ಮೂಲಕ ಬೆಳಕನ್ನು ಹಾಯಿಸಿದಾಗ ಅದು ಹೇಗೆ ವಿವಿಧ ಬಣ್ಣಗಳಾಗಿ ಒಡೆಯುವುದೋ ಆ ಮಾದರಿಯಲ್ಲಿ ಬೇರೆ ಬೇರೆ ಬಣ್ಣಗಳ ತೆಳು ಮತ್ತು ದಟ್ಟ ಮಿಶ್ರಣದಲ್ಲಿ ನೆರಳು ಮತ್ತು ಬೆಳಕನ್ನು ಚಿತ್ರಿಸಲಾಯ್ತು. ಹೀಗೆ ಒಂದಕ್ಕೊಂದು ಒಪ್ಪುವ ರೀತಿಯಲ್ಲಿ ಬಣ್ಣಗಳ ವಿಂಗಡನೆಯು ಇನ್ನೊಂದು ಕಲಾ ವಿಭಾಗಕ್ಕೆ ದಾರಿ ಮಾಡಿಕೊಟ್ಟಿತು. ಉದಾಹರಣೆಗೆ ಮುಖ್ಯ ಬಣ್ಣಗಳಾದ ಕೆಂಪು ಮತ್ತು ಹಳದಿಗಳನ್ನು ಅಕ್ಕ ಪಕ್ಕದಲ್ಲಿ ಬಳಸಿ ಉಪಮುಖ್ಯ ಬಣ್ಣವಾದ ಕೇಸರಿ ಇದೆಯೇನೋ ಎಂಬ ಭ್ರಮೆ ಹುಟ್ಟಿಸುವುದು. ಕೆಂಪು ಹಳದಿ ಗೆರೆಗಳನ್ನು ಒಂದರ ಮೇಲೊಂದು ಹಾಯುವಂತೆ ಮಾಡಿಅಥವಾ ಕೆಂಪು ವಸ್ತುವಿನ ನೆರಳನ್ನು ಹಳದಿ ಮತ್ತು ನೀಲಿ ಚುಕ್ಕೆಗಳನ್ನಿಟ್ಟು ಹಸಿರು ಬಣ್ಣದಂತೆ ಕಾಣುವಂತೆ ಮಾಡುವುದು. ಹಸಿರು, ಕೆಂಪು ಪೂರಕ ಬಣ್ಣಗಳು. ಇದೇ ತತ್ವವನ್ನು ಆಧರಿಸಿ ಬೇರೆ ಬೇರೆ ಬಣ್ಣಗಳ ಚುಕ್ಕೆಗಳ ಮೂಲಕ ದೊಡ್ಡ ಭೂಭಾಗ ಅಥವಾ ಸಮುದ್ರದ ಮೇಲ್ಮೈಯನ್ನು ಚಿತ್ರಿಸುವುದು. ಭಾವಚಿತ್ರದಲ್ಲಿ ಒಂದು ವಸ್ತು ಅಥವಾ ದೃಶ್ಯವನ್ನು ನೋಡಿದಂತೆ ಇರುತ್ತದೆ. ಆದರಿಲ್ಲಿ ನೆರಳು ಬೆಳಕಿನ ವಿಶೇಷ ತಂತ್ರವನ್ನು ಬಳಸಿ ಅದನ್ನು ಸ್ವತಃ ಅನುಭವಿಸುವಂತೆ ಕ್ಯಾನ್‌ವಾಸಿನ ಮೇಲೆ ಎರಕಗೊಂಡಿತು. ಬಹುಶಃ ಕ್ಯಾಮರಾದ ಶೋಧನೆಯಾಗಿ ಯಥಾವತ್ ಚಿತ್ರಗಳ ಸ್ಪರ್ಧೆ ಹೆಚ್ಚು ತೀವ್ರವಾಗಿದ್ದು ಇದಕ್ಕೆ ಕಾರಣವಾಗಿರಬಹುದು.

ಪ್ರಯೋಗಗಳನ್ನು ನಡೆಸಲು ಮೈದಾನವೊಂದು ಸೃಷ್ಟಿಯಾಗಿದ್ದೇ ತಡ ಬೇರೆ ಬೇರೆ ಮನೋಭಾವದವರು ಬೇರೆ ಬೇರೆ ಹಿನ್ನಲೆಯುವರು ಚಿತ್ರಕಲೆಯನ್ನು ಬೇರೆ ಬೇರೆ ದಿಕ್ಕಿನಲ್ಲಿ ಒಯ್ಯಲು ಆರಂಭಿಸಿದರು . ಬಲರ್ಝಾಕ್ ಮತ್ತು ಝೋಲಾರಂಥ ಮಹಾನ್ ಚಿಂತಕರ, ಬರಹಗಾರರ ಪ್ರಭಾವವೂ ಇವರ ಮೇಲೆ ಬೀಳದಿರಲಿಲ್ಲ. ಮುದ್ರಿತ ಚಿತ್ರದ ಮುಂದಿನ ಹಂತವಾಗಿ ಮುದ್ರಿತೋತ್ತರ

ಚಿತ್ರಯುಗದ ಆರಂಭವಾಯಿತು. ಇದರಲ್ಲಿ ಒಂದೊಂದು ಬಣ್ಣಕ್ಕೂ ತನ್ನದೇ ಆದ ಅಭಿವ್ಯಕ್ತಿ ಇತ್ತು .ಬಣ್ಣವನ್ನು ಒಡೆದು ಭಾವನೆಗಳನ್ನು ಬಿತ್ತರಿಸುವುದಕ್ಕಿಂತ ಹೆಚ್ಚಾಗಿ ಒಂದೊಂದು ಬಣ್ಣವೇ ಒಂದೊಂದು ಭಾವನೆಯನ್ನು ಬಿಂಬಿಸುವಂತೆ ಚಿತ್ರಗಳಲ್ಲಿ ಮೂಡಿತು.

ಜ್ಯಾಮಿತಿಗಳನ್ನುಪಯೋಗಿಸಿಕೊಂಡು ಚಿತ್ರಗಳಲ್ಲಿ ಒಂದರ ಮುಂದೆ ಒಂದು ನಿಂತಿರುವ, ಒಂದರ ಹಿಂದೆ ಒಂದು ನಿಂತಿರುವ ಭಾಗಗಳನ್ನು ಚಿತ್ರಿಸಲು ಸಾಧ್ಯವಾಯಿತು. ಇದಕ್ಕೂ ಮೊದಲು ತೆಳುಬಣ್ಣ, ಮಿಶ್ರಣಬಣ್ಣಗಳನ್ನುಪಯೋಗಿಸಿ ಈ ಪರಿಣಾಮವನ್ನು ತರಲಾಗುತ್ತಿತ್ತು. ಪಿಕಾಸೋ ಅವರ ಚಿತ್ರದಲ್ಲಂತೂ ಒಂದು ವಯೋಲಿನ್‌ನ್ನು ಬಿಡಿಸಿ ತೋರಿಸುವ ಬದಲಿಗೆ ಅದರಿಂದ ಹೊರ ಹೊಮ್ಮುವ ಸಂಗೀತ, ಕಂಪನಗಳನ್ನೇ ಜಾಮಿತಿಯ ವಸ್ತುಗಳನ್ನುಪಯೋಗಿಸಿ ಚಿತ್ರಿಸಲಾಗಿದೆ. ಈ ರೀತಿಯ ಚಿತ್ರಣಕ್ಕೆ 'ಕ್ಯೂಬಿಸಂ' ಎಂದು ಕರೆದರು. ಮನುಷ್ಯನ ಆವಿಷ್ಕಾರ ಬುದ್ಧಿ, ಸೃಜನಶೀಲತೆ ಹೀಗೆಯೇ ಮುಂದೆ ಸಾಗಿತು. ತನ್ನ ಮನಸ್ಸಿನ ಭಾವನೆಗಳನ್ನು ಒಂದಷ್ಟು ಬಣ್ಣ ಎರಚುವುದರ ಮೂಲಕ ಅಭಿವ್ಯಕ್ತಿಸಲು ಅವನು ಬಯಸಿದ. ಕಣ್ಣಿಗೆ ಕಾಣದಿದ್ದನ್ನೂ ಚಿತ್ರಿಸಲು ಹೊರಟನವ. ಬಹಳಷ್ಟು ಬರೆದು ಏನೋ ಒಂದನ್ನು ಹೇಳುವ ಬದಲು ಕೆಲವೇ ಗೆರೆಗಳನ್ನೆಳೆದು ಬಹಳಷ್ಟನ್ನು ಹೇಳಬಾರದೇಕೆ? ಮಗುವೊಂದು ಏನನ್ನಾದರೂ ಹೇಳಹೊರಟರೆ ಕೆಲವೇ ಗೆರೆಗಳಲ್ಲಿ ಹೇಳಿ ಮುಗಿಸುವಂತೆ ಹೆಚ್ಚು ಸರಳವಾಗಿ, ತಕ್ಷಣದ್ದೇ ಪ್ರತಿಸ್ಪಂದನವಾಗಿ ಚಿತ್ರ ಮೂಡಿಬರಬೇಕು.

ಸೃಜನಶೀಲ ಮನಸ್ಸು ಮತ್ತೊಮ್ಮೆ ಹಿಂದಿನ ಆದಿವಾಸಿ ಜನರಂತೆ ಸಂಪೂರ್ಣ ಸ್ವತಂತ್ರವಾಗಿರಲು ಬಯಸಿತು. ಬಹುಕಾಲದಿಂದ ನಡೆದುಬಂದ ಔಪಚಾರಿಕ ಕಲೆಯನ್ನದು ಬಹಿಷ್ಕರಿಸಿತು. ಕೆಲವು ಪ್ರಯೋಗಶೀಲರಿಗೆ ತಮ್ಮ ಕನಸುಗಳು ಮತ್ತು ಮನದೊಳಗೆ ಹುದುಗಿಟ್ಟ ಭಾವನೆಗಳೇ ಬಾಹ್ಯ ಜಗತ್ತಿಗಿಂತ ಹೆಚ್ಚು ಪ್ರಮುಖವೆನಿಸಿದವು. ಕನಸುಗಳು ಕಲಾಕೃತಿಯ ವಸ್ತುಗಳಾದಾಗ ಅಂಥ ಕಲೆಯನ್ನು 'ಸರ್ರಿಯಲಿಸ್ಟಿಕ್ ಆರ್ಟ್' ಎಂದು ಕರೆಯಲಾಯ್ತು. ಕಣ್ಣಿಗೆ ಕಾಣುವ ಚಿತ್ರಗಳಿಂದ ದೂರವಾಗಿ, ಅದರ ಬಗ್ಗೆ ಏನೂ ಹೇಳದೆ ಕಲಾವಿದರು ಕೇವಲ ಭಾವನೆಗಳನ್ನೇ ಚಿತ್ರಿಸಹೊರಟಾಗ ಅವರು ಕಲೆಯ ಪ್ರಾರಂಭಿಕ ಪ್ರಪಂಚಕ್ಕೆ ಕಾಲಿರಿಸಿದ್ದರು. ಇಂಥ ಪ್ರಯೋಗಗಳು ಚಿತ್ರಕಾರ ಮತ್ತು ನೋಡುಗನ ಮಧ್ಯೆ ಕಂದರವನ್ನು ಅಗಲ ಮಾಡುತ್ತ ಹೋದವು. ಶೈಕ್ಷಣಿಕ ಶಿಸ್ತು ಬೇಡವೆನಿಸಿ, ಅದನ್ನು ಬದಿಗೊತ್ತಿ, ತಮ್ಮನ್ನು ತಾವೇ ಪ್ರಸಿದ್ಧಿಯ ಬೆಳಕಿಗೆ ತಂದೊಡ್ಡಿಕೊಂಡರು ಕೆಲ ಕಲಾವಿದರು. ಈ ರೀತಿಯ ಪ್ರಯೋಗ ಗಳನ್ನು ನೋಡಿದ ಎಷ್ಟೋ ಜನರಿಗೆ

ತಾವೂ ಕೂಡ ಏನೂ ಅಭ್ಯಾಸವಿಲ್ಲದೆಯೇ ಚಿತ್ರಕಾರರಾಗಬಹುದೆಂದು ಅನಿಸಿಬಿಟ್ಟಿತು. ಕ್ಯಾನ್ವಾಸಿನ ಮೇಲೆ ಎರ್ರಾಬಿರ್ರಿ ಬಣ್ಣವನ್ನು ಚೆಲ್ಲುವುದೇ ಒಂದು ' ಆ್ಯಕ್ಷನ್ ಪೇಂಟಿಂಗ್' ಎಂಬ ಹೆಸರಿನಲ್ಲಿ ಪ್ರಸಿದ್ಧವಾದಾಗ ಮನುಷ್ಯನಷ್ಟೇ ಅಲ್ಲ, ಮಂಗಗಳೂ ಕೂಡ ಚಿತ್ರಕಾರರೆಂದು ಹೆಸರು ಮಾಡಿದವು. ಬ್ರಿಟಿಷ್ ಪ್ರಾಣಿ ಸಂಗ್ರಹಾಲಯದ ಒಂದು ಚಿಂಪಾಂಜಿ ಬರೆದ ಚಿತ್ರಗಳ ಬಗ್ಗೆ ನೀವು ಕೇಳಿರಬಹುದು.'ಸ್ಟುಡಿಯೋ ಇಂಟರ್‌ನ್ಯಾಷನಲ್'ನಲ್ಲಿ ನಾನು ಅವುಗಳನ್ನು ನೋಡಿದ್ದೆ. ಇಂಥ ಹುಚ್ಚಾಟಗಳ ಮಧ್ಯೆಯೂ ಅಲ್ಲೊಂದಿಲ್ಲೊಂದು ನಿಜ ಕಲಾಕೃತಿಯು ಹೊರಬಂದಿದ್ದೂ ಉಂಟು. ಒಂದು ದೊಡ್ಡ ಕ್ಯಾನ್ವಾಸಿನ ಮೇಲೆ ಎಳೆದ ಒಂದೇ ಒಂದು ಬಣ್ಣದ ಗೆರೆಯು ಬೆಳೆಯುತ್ತಿರುವ ಹುಲ್ಲಿನ ಅಲಗಿನಲ್ಲಿ ಇರುವ ಶಕ್ತಿಯನ್ನು ಪ್ರತಿನಿಧಿಸಬಲ್ಲುದು. ಇಂಥ ವಿಶೇಷ ವಿಚಾರಗಳೂ ಅಲ್ಲೊಂದಿಲ್ಲೊಂದು ರೂಪು ತಳೆದವು. ಈ ದಿನಗಳಲ್ಲಿ ಕಲಾಭಿವ್ಯಕ್ತಿ ಎಂದರೆ ಮಾನವನ ಬೌದ್ಧಿಕ ಮತ್ತು ಮಾನಸಿಕ ಭಾವನೆಗಳೆರಡರ ಚಟುವಟಿಕೆ ಎನಿಸಿದೆ.

ಕಲೆಯ ಹುಟ್ಟು ಮತ್ತು ಬೆಳವಣಿಗೆಯ ಬಗ್ಗೆ ನಿನ್ನೆಯ ಭಾಷಣದಲ್ಲಿ ನಾವು ಮಾತನಾಡಿದೆವು. ಇಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಇಂದಿನ ಕಲೆ ಹೇಗಿದೆ ಎಂಬ ಬಗ್ಗೆ ಮಾತನಾಡುವಾ. ಪುಸ್ತಕಗಳಿಂದ ಓದಿದ ಜ್ಞಾನದೊಂದಿಗೆ ನಮ್ಮ ಸ್ವಂತದ ಅನುಭವ ಮತ್ತು ಆಲೋಚನೆಗಳೂ ಮಿಳಿತವಾದಾಗಲೇ ಶಿಕ್ಷಣ ಎನ್ನುವುದು ಅರ್ಥಪೂರ್ಣವಾಗುತ್ತದೆ. ಇಪ್ಪತ್ತನೇ ಶತಮಾನದಲ್ಲಿ ಸ್ವತಂತ್ರ ಆಲೋಚನೆ ಮತ್ತು ವೈಯುಕ್ತಿಕ ಅಭಿವ್ಯಕ್ತಿಗಳೇ ಕಲೆ ಎನ್ನಿಸಿವೆ. ತಾನು ನೋಡಿದ್ದನ್ನು ಕ್ಯಾನ್ವಾಸಿನ ಮೇಲೆ ಇಳಿಸುವುದು ಈಗ ಕಲೆ ಎನಿಸಿಕೊಳ್ಳುವುದಿಲ್ಲ. ಅದರಲ್ಲಿ ಶೈಕ್ಷಣಿಕ ಸಂಪ್ರದಾಯವು ಪೂರ್ತಿಯಾಗಿ ಮರೆಯಾಗಿದೆ. ಇಂದು ಕಲಾಕಾರನ ಸೃಜನಶೀಲತೆ, ಭಾವನಾತ್ಮಕ ಮತ್ತು ಬೌದ್ಧಿಕ ನಿಲುವುಗಳ ಮಿಶ್ರಣವೇ ಕಲೆ ಎನಿಸಿಕೊಳ್ಳುತ್ತದೆ.

ವಿಜ್ಞಾನವು ಬೆಳೆದಂತೆ ಕಲಾಕಾರರು ಇನ್ನೂ ಹೆಚ್ಚಿನ ಪದ್ಧತಿ ಮತ್ತು ಸಾಧನಗಳನ್ನು ಬೆಳೆಸಿಕೊಂಡರು. ವಿಮಾನಗಳ ಸಂಶೋಧನೆಯಾಗಿ ಜಗತ್ತು ದಿನದಿಂದ ದಿನಕ್ಕೆ ಸಣ್ಣದಾದಾಗ ವಿಚಾರ ವಿನಿಮಯವು ಹೆಚ್ಚು ಸುಲಭವೆನಿಸಿತು. ಕಲಾ ಜಗತ್ತು ಹೆಚ್ಚು ಹೆಚ್ಚು ವಿಶಾಲವಾಗುತ್ತಾ ಹೋದಂತೆ ಕಲೆಯ ಮೂಲಭೂತ ಮಾರ್ಗದರ್ಶಕ ಸೂತ್ರಗಳಾದ ಗೆರೆ, ಆಕೃತಿ ಮತ್ತು ಬಣ್ಣಗಳು ಇಡೀ ಜಗತ್ತಿನೆಲ್ಲೆಡೆಯಲ್ಲೂ ಮಾರ್ಗದರ್ಶಕ ಸೂತ್ರಗಳಾಗಿ ನಿಂತವು. ಇವೇ ಒಬ್ಬರನ್ನು ಒಬ್ಬರು ನೋಡಿ ಚಿತ್ರಿಸುವುದಕ್ಕೂ ಕಾರಣವಾದವು. ಯೂರೋಪಿನಲ್ಲಿ ಈ ಹೊಸ ಚಳುವಳಿಯು ಈ ಶತಮಾನದ ಆರಂಭದಲ್ಲಿಯೇ ಎದ್ದಿದ್ದು ನಮ್ಮಲ್ಲಿಗೆ ತಲುಪಿದ್ದು

ತಡವಾಗಿ. ಹೀಗಾಗಿ ಒಬ್ಬರದನ್ನು ಇನ್ನೊಬ್ಬರು ನೋಡಿ ಚಿತ್ರಿಸುವ ಪ್ರವೃತ್ತಿ ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿದೆ. ಐರೋಪ್ಯ ದೇಶಗಳಲ್ಲಿ ಆದ ಹೊಸ ಆವಿಷ್ಕಾರಗಳು ನಮ್ಮ ಜನರಿಗೆ ಮೊದಮೊದಲು ಎರಡನೆ (ದರ್ಜೆಯು) ಅನುಭವವೆನಿಸಿತು. ಮುವ್ವತ್ತರ ದಶಕದಲ್ಲಿ ಯೂರೋಪು ಮತ್ತು ಭಾರತಗಳ ಮಿಶ್ರ ಸಂಜಾತೆಯಾದ ಅಮೃತಾ ಶೇರ್ ಗಿಲ್ ಯೂರೋಪಿನಲ್ಲಿ ಕಲಾತರಬೇತಿ ಪಡೆದವಳಾಗಿ ಭಾರತದ ಕಲಾಕ್ಷೇತ್ರಕ್ಕೆ ಬಂದಳು. ಒಬ್ಬ ಕ್ರಾಂತಿಕಾರಳಾಗಿ ಅವಳ ಪ್ರವೇಶವಾಯಿತು. ತಾನಿದ್ದಷ್ಟು ಸ್ವಲ್ಪ ಸಮಯದಲ್ಲಿಯೇ ಅವಳು ಭಾರತದ ಕಲಾ ಪ್ರಪಂಚಕ್ಕೆ ಒಂದು ಹೊಸ ತಿರುವು ಕೊಟ್ಟಳು. ಅವಳಿದ್ದಷ್ಟು ಕಾಲ ಅವಳ ಆಕರ್ಷಕ ವ್ಯಕ್ತಿತ್ವವು ಇಲ್ಲಿನ ಕಲಾಕಾರರಿಗೆ ವರ್ತಮಾನದಲ್ಲಿದ್ದುಕೊಂಡು ಹಿಂದೆ ನೋಡುವ ಬದಲು ಭವಿಷ್ಯದತ್ತ ನೋಡುವುದನ್ನು ಕಲಿಸಿಕೊಟ್ಟಿತು. ಇದೇ ವೇಳೆಯಲ್ಲಿ ವಿಶ್ವ ಕವಿ ರವೀಂದ್ರನಾಥ ಠಾಕೂರರು ಒಬ್ಬ ವ್ಯಕ್ತಿಯ ಕಲಾಭಿವೃತ್ತಿಯು ಆತನ ವೈಯಕ್ತಿಕ ಭಾವನೆಗಳೇ ಹೊರತು ಕಲಾಶಾಲೆಯಲ್ಲಿ ಕಲಿತದ್ದಲ್ಲ ಎಂದು ಸಾಧಿಸಿ ತೋರಿಸಿದರು. ಕಲಾಶಾಲೆಯ ಎಲ್ಲಾ ನೀತಿ ನಿಯಮಾವಳಿಗಳಿಗೂ ಅವರು ಅಪವಾದವಾಗಿದ್ದರು. ತಮ್ಮ ವೃದ್ಧಾಪ್ಯದಲ್ಲಿ ಅವರ ಮಾಗಿದ ಮನಸ್ಸು, ಬಣ್ಣ ಮತ್ತುತಾಳಗಳ ಆಳ ಅರಿವಿನಿಂದ ಹೊರತಂದ ಚಿತ್ರಗಳು ಹೃದಯ ಮತ್ತು ಮಿದುಳು ಎರಡನ್ನೂ ತಟ್ಟುವಂತಿವೆ. ಸೂಕ್ಷ್ಮ ಮನಸ್ಸು ಮತ್ತು ಉತ್ತಮ ಅಭಿರುಚಿ ಇವು ಕಲಿತ ಕಲಾಪ್ರೌಢಿಮೆಗಿಂತ ಹೆಚ್ಚಿನವು ಎಂಬುದನ್ನವರು ಸಾಧಿಸಿ ತೋರಿಸಿದರು. ಸ್ವಾತಂತ್ರ್ಯಾನಂತರವೇ ನಮ್ಮ ಕಲಾವಿದರಿಗೆ ಈ ವಿಶಾಲ ಕಲಾ ಜಗತ್ತಿನಲ್ಲಿ ತಮ್ಮತನವನ್ನು ತೋರಿಸಿಕೊಡಲಿಕ್ಕೆ ಸಾಧ್ಯವಾಯಿತು.

ಇಂದು ನಮ್ಮ ದೇಶದಲ್ಲೂ ದೇಶದ ಹೊರಗಡೆಯೂ ಕಲಾಕಾರರಿಂದ ಅವಿಶ್ರಾಂತವಾಗಿ ಪ್ರಯೋಗಗಳು ನಡೆದೇ ಇವೆ. ಪೇಂಟಿಂಗ್‌ಗಳೆಂದರೆ ಗೋಡೆಗೆ ನೇತುಹಾಕುವ ಕೆಲವು ಸುಂದರ ಚಿತ್ರಗಳಾಗಿ ಮಾತ್ರ ಉಳಿದಿಲ್ಲ. ಒಂದು ಕಥೆ ಹೇಳುವ, ಒಂದು ಅನುಭವವನ್ನು ಹೊರಚೆಲ್ಲುವ ಅಥವಾ ಒಂದು ವಸ್ತುವಿನ ಬಗ್ಗೆ ಮಾಹಿತಿ ನೀಡುವ ಚಿತ್ರವಾಗಿಯೂ ಅವು ಉಳಿದಿಲ್ಲ. ಮನಸ್ಸಿನಾಳವನ್ನು ಅದು ಕಲುಕಬೇಕು. ನೊಂದ ಮನಸ್ಸಿಗೆ ಸಾಂತ್ವನ ಕೊಡಬೇಕು, ಮಾನಸಿಕ ಸ್ಥಿತಿಯನ್ನು ಮೇಲೆತ್ತಬೇಕು, ಅಂಥದು ಕಲಾಕೃತಿಯೆನಿಸಿದೆ. ಆದರೆ ಸಾಮಾನ್ಯ ಜನರಿಗೆ ಇಂಥ ಕಲಾಕೃತಿಯನ್ನು ಒಪ್ಪಿಕೊಳ್ಳಲು, ಹೊಗಳಲು ಸಾಧ್ಯವಾಗುತ್ತಿಲ್ಲ.

ಭಾರತೀಯ ಸಮಕಾಲೀನ ಕಲೆಯ ಬಗ್ಗೆ ನಾವು ಮಾತನಾಡುವಾಗ ಹೊರದೇಶಗಳಲ್ಲಿ ಆರಂಭಗೊಂಡ ಅನೇಕ 'ಇಸಂ' ಗಳ ಬಗ್ಗೆ ನೆನಪಾಗುತ್ತದೆ.

ನಮ್ಮ ದೇಶವೂ ಕೂಡ ಅನೇಕ ರೀತಿಯ ಕಲಾಸಾಧನೆಗಳ ತವರು ಎಂಬುದನ್ನು ನಾವು ಮರೆಯುತ್ತೇವೆ. ನರಸಿಂಹ ಅಥವಾ ದುರ್ಗೆಯರ ಮೂರ್ತಿಗಳನ್ನೇ ನೋಡಿರಿ. ನರಸಿಂಹನಲ್ಲಿ ಹಿರಣ್ಯಕಶಿಪುವನ್ನು ಕೊಲ್ಲಲು ಮಾನವನಿಗಿಂತ ಹೆಚ್ಚಿನವನಾದ ಅರ್ಧಮಾನವ, ಅರ್ಧಸಿಂಹದ ರೂಪದ ದೇವರನ್ನು ಸೃಷ್ಟಿಸಿದರೆ, ಮಹಿಷಾಸುರನಂಥ ದುರುಳನನ್ನು ಕೊಲ್ಲಲು ೧೬ ಕೈಗಳಿರುವ ಉಗ್ರರೂಪಿ ಮಹಿಳೆಯಾಗಿ ಶಕ್ತಿದೇವತೆಯನ್ನು ರೂಪಿಸಿದ್ದಾರೆ. ಈ ಕೃತಿಗಳಲ್ಲಿ ಮೂಲ ಕಲಾವಿದ ಏನನ್ನು ಹೇಳಬಯಸಿದ್ದನೋ ಅದನ್ನು ಪೂರ್ಣ ಪ್ರಮಾಣದಲ್ಲಿ ಅರ್ಥೈಸಲು ಸಾಧ್ಯವಾಗಿಲ್ಲ. ಯುರೋಪಿನ ಪ್ರಸಿದ್ಧ ಕಲಾವಿದ ಪಿಕಾಸೋ ನಾಝಿಗಳ ಕ್ರೌರ್ಯವನ್ನು ಪ್ರತಿಬಿಂಬಿಸುವ ಚಿತ್ರವೊಂದನ್ನು ಸೃಷ್ಟಿಸಿದ್ದ. ಸ್ಪೇನ್ ದೇಶದ 'ಗ್ಯುರ್ನಿಕಾ' ಎಂಬ ಪುಟ್ಟ ಪಟ್ಟಣದ ಮೇಲೆ ಅವರು ನಡೆಸಿದ ಅಮಾನವೀಯ ಕೃತ್ಯಗಳಿಗೆ ಪ್ರತಿಕ್ರಿಯೆಯಾಗಿ 'ಗ್ಯುರ್ನಿಕಾ' ಎಂಬ ಚಿತ್ರ ರಚಿಸಿದ್ದ. ಅದರಲ್ಲಿ ಕಾಲೂರಿ ನಿಂತ ವ್ಯಗ್ರ ಕುದುರೆಯು ಜನರಲ್ ಫ್ರಾಂಕೋನ ಫ್ಯಾಸಿಸಂನ್ನು ಕಿತ್ತೊಗೆದ ದೃಶ್ಯ ಅಭಿವ್ಯಕ್ತವಾಗಿತ್ತು. ಈ ಚಿತ್ರವು ಇಡೀ ಕಲಾ ಪ್ರಪಂಚವನ್ನೇ ಕಲಕಿ ಹಾಕಿತು. ಚಿತ್ರವನ್ನು ನೋಡಿದ ನಾಝಿಗಳು ಪಿಕಾಸೋನನ್ನು ಕರೆದು ಅದರ ಬಗ್ಗೆ ವಿವರ ನೀಡಲು ಕೇಳಿದರು. 'ನನ್ನನ್ನೇನು ಕೇಳುತ್ತೀರಿ? ನೀವು ಸೃಷ್ಟಿ ಮಾಡಿದ್ದು ಅದು' ಎಂಬುದಾಗಿ ಪಿಕಾಸೋ ಉತ್ತರಿಸಿದನಂತೆ, ಕಲಾವಿದನ ಮನಸ್ಸು ಹೊರಗಿನ ಘಟನೆಗಳಿಂದ ತೀವ್ರ ಘಾಸಿಗೊಂಡಾಗ ಇಂಥ ಶ್ರೇಷ್ಠ ಕೃತಿಗಳ ಸೃಷ್ಟಿಯಾಗುತ್ತದೆ.

ಭಾರತೀಯ ಕಲಾಪ್ರಪಂಚಕ್ಕೆ ಸಾಂಕೇತಿಕ ಕಲೆ ಕೂಡ ಅಪರಿಚಿತವೇನಲ್ಲ. ನಮ್ಮ ಧಾರ್ಮಿಕ ಚಿತ್ರಗಳೆಲ್ಲವೂ ಸಂಕೇತಗಳಿಂದಲೇ ಕೂಡಿವೆ. ಅವೆಲ್ಲವೂ ಜ್ಯಾಮಿತಿಯ ಸಂಕೇತಗಳು. ಹಳ್ಳಿಯ ಜನರು ತಮ್ಮ ಗುಡಿಸಲಿನ ಗೋಡೆಗಳನ್ನು ಮಣ್ಣಿನಿಂದ ಸಾರಿಸಿ ದಟ್ಟ ಬಣ್ಣಗಳಲ್ಲಿ ವಿವಿಧ ಆಕೃತಿಗಳ ಚಿತ್ರಗಳನ್ನು ಬಿಡಿಸಿರುತ್ತಾರೆ. ಇದು ಇಡೀ ಜಗತ್ತಿನ ಎಲ್ಲಾ ಭಾಗಗಳಲ್ಲೂ ಒಂದೇ ತೆರನಾಗಿ ವ್ಯಕ್ತವಾಗಿದೆ. ಇಂದಿನ ಪಾಶ್ಚಾತ್ಯ ಕಲೆಯ ಮೇಲೂ ಸಹ ಹಿಂದೂ ಸಂಸ್ಕೃತಿಯ ಪ್ರಭಾವ ಇದ್ದೇ ಇದೆ.

ಇಂದು ಕಲೆಯಲ್ಲಿ ಹತ್ತಾರು ನಮೂನೆಗಳು ಬಂದಿವೆ. ಅಬ್‌ಸ್ಟ್ರಾಕ್ಟ್ ಆರ್ಟ್, ಆ್ಯಕ್ಷನ್ ಪೇಂಟಿಗ್, ಪಾಪ್ ಆರ್ಟ್, ಓಪ್ ಆರ್ಟ್, ನೋಪ್ ಆರ್ಟ್ ಎಂದು ಇನ್ನೂ ಹೊಸ ಹೊಸ ಕಲಾನಮೂನೆಗಳು ಆವಿಷ್ಕಾರ ಆಗುತ್ತಿವೆ. ಸೃಜನಶೀಲ ಮನಸ್ಸು ತನ್ನದೇ ರೀತಿಯಲ್ಲಿ ಕೆಲಸ ಮಾಡುವುದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಇಂಥ ಆವಿಷ್ಕಾರಗಳು ಹೊಸ ಫ್ಯಾಶನ್ನೆಂದೋ, ಹೊಸ

ಹುಚ್ಚು ಎಂದೋ ದಾಟಿ ಹೋಗಿ ಬಿಡುತ್ತವೆ. ಅಥವಾ ಅಂಥ ಯಾವುದೋ ಆವಿಷ್ಕಾರವು ಕಲಾ ಪರಂಪರೆಯ ಒಂದು ಕೊಂಡಿಯಾಗಿ ಉಳಿದುಕೊಳ್ಳಲೂಬಹುದು.

'ಆಧುನಿಕ ಭಾರತದ ಕಲೆಯ ಪ್ರಾಮುಖ್ಯವೇನು' ಎಂದು ನೀವು ಕೇಳಿದ್ದೀರಿ. ಕಲೆಯು ಆಧುನಿಕವಾಗಿದ್ದು ಭಾರತೀಯವಾಗಿರಲು ಸಾಧ್ಯವೇ? ಆಧುನಿಕ ಕಲೆ ಎಂದರೆ ಅದು ಇಡೀ ಜಗತ್ತಿನಲ್ಲಿ ಸ್ವೀಕಾರಗೊಳ್ಳುತ್ತದೆ. ಆಧುನಿಕ ಕಲೆ ಎಂದರೆ, ಆ ಕಲೆ ಕಾಲದ ಗಡಿಯನ್ನು ದಾಟಿರಬೇಕು. ಕಮಲದಂಥ ಕಣ್ಣು, ಸಂಪಿಗೆಯಂಥ ಮೂಗು, ಬಡನಡು, ತುಂಬಿದ ಎದೆ ಇಂಥ ಕಲ್ಪನೆಗಳು ಇಂದು ಕಲೆ ಎನಿಸುವುದಿಲ್ಲ. ಯಾವುದೋ ಒಂದು ಚಿಂತನೆಯ ಕ್ರಾಂತಿಯು ಆ ಚಿತ್ರದಲ್ಲಿ ಇರಬೇಕು. ಹಿಂದೆ ಆಗಿ ಹೋದ ಸಂಪ್ರದಾಯಗಳನ್ನು ವಿರೋಧಿಸಬೇಕು. ಅಧಿಕಾರ ಶಾಹಿಯನ್ನು ಪ್ರತಿಭಟಿಸುತ್ತಿರಬೇಕು. ಇಂದಿನ ಯಂತ್ರ ಯುಗದ ಭೋಗ ಜೀವನದ ವಿರುದ್ಧವೂ ಸಿಡಿದೇಳುತ್ತಿರಬೇಕು. ಆಧುನಿಕ ಕಲೆಯು ತನ್ನ ವಿಶೇಷ ಶಕ್ತಿಯಿಂದ ಮಾನವನಲ್ಲಿರುವ ಕ್ರೌರ್ಯವನ್ನು ಹೊರದೂಡಿ ಮಾನವೀಯತೆಯನ್ನು ತುಂಬಿಸುವಂತಿರಬೇಕು. ಅದರಲ್ಲಿ ಭಾವನೆಗಳಿರುತ್ತವೆ. ಆದರೆ ಇನ್ನೊಬ್ಬರದನ್ನು ಅನುಕರಿಸುತ್ತಿರುವುದಿಲ್ಲ. ಭಾರತೀಯ ಕಲೆ ಎನ್ನಲೂ ಆ ಕಲಾಕಾರ ನಿಜವಾದ ರೀತಿಯಲ್ಲಿ ಭಾರತೀಯನಾಗಿರಬೇಕು. ತನ್ನ ವಿಚಾರ, ಕೃತಿ ಎರಡರಲ್ಲೂ ಭಾರತೀಯನೆನಿಸಿರಬೇಕು.ಆತನ ವಿಚಾರದಲ್ಲಿ ಸಾವಿರಾರು ವರ್ಷಗಳ ಭಾರತೀಯ ನಾಗರೀಕತೆಯ ಆಳವಿದ್ದರೆ, ಆತನ ಕಲಾಭಿವ್ಯಕ್ತಿಗೆ ತನ್ನಿಂತಾನೆ ಭಾರತೀಯತೆಯು ಬಂದಿರುತ್ತದೆ. ಈ ಗುಣವನ್ನು ಸರಿಯಾಗಿ ಚಿತ್ರಿಸಲು ಸಾಧ್ಯವಾಗದು. ಅದನ್ನು ಅನುಭವಿಸಬೇಕೇ ಹೊರತು ಹೇಳಲಾಗದು. ದೇವರ ಅಸ್ತಿತ್ವದ ಬಗ್ಗೆ ಇರುವಂತೆ ಭಾರತೀಯ ಕಲಾಕಾರನು ಪ್ರಾಮಾಣಿಕವಾಗಿ, ತನ್ನ ಮನದಾಳದಿಂದ ನಿಜವಾಗಿ ಚಿತ್ರ ರಚನೆಯಲ್ಲಿ ತೊಡಗಿಕೊಂಡಿದ್ದರೆ ಆತನ ಚಿತ್ರಕ್ಕೆ ತನ್ನದೇ ಆದ ತನ್ನತನವಿದ್ದೇ ಇರುತ್ತದೆ. ನಮ್ಮ ಎಷ್ಟೋ ಕಲಾಕಾರರು ಈಗಾಗಲೇ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ. ಅನೇಕ ಪಂಡಿತರು ಹೇಳಿದ್ದಾರೆ; 'ಸಂಗೀತ, ಒಳ್ಳೆಯ ಪುಸ್ತಕ ಮತ್ತು ಕಲಾಕೃತಿಗಳನ್ನು ನೋಡಿ ಮೆಚ್ಚದವ ಪರಿಪೂರ್ಣ ಮನುಷ್ಯನಾಗಿರಲು ಸಾಧ್ಯವಿಲ್ಲ' ಎಂದು. ಈ ಜೀವನವು ನಮಗೆ ಏನೇನನ್ನು ಕೊಡಲಿದೆಯೋ, ಎಲ್ಲವನ್ನು ಸಂತೋಷದಿಂದ ಸ್ವೀಕರಿಸುತ್ತಾ ನಾವು ನಮ್ಮ ಜೀವನವನ್ನು ಇನ್ನಷ್ಟು ಶ್ರೀಮಂತವಾಗಿಸಿಕೊಳ್ಳೋಣ.

–ಕನ್ನಡಕ್ಕೆ : ಶಾರದಾ ಗೋಪಾಲ.

ಬಡವರ ಅನುಭವದಲ್ಲಿ "ಶಾಂತಿ" ಎಂದರೆ ಯುದ್ಧ

–ಅರುಂಧತಿರಾಯ್.

(೨೦೦೪ ನವೆಂಬರ್ ೨ ರಂದು ಶೇಮೂರ್ ಸೆಂಟರಿನಲ್ಲಿ ಸಿಡ್ನಿಶಾಂತಿ ಪುರಸ್ಕಾರವನ್ನು ಪಡೆದ ಸಂದರ್ಭದಲ್ಲಿ ಮಾಡಿದ ಭಾಷಣ.)

ಹಳೆಯ ಗಾದೆಗಳಲ್ಲಿ ಕೆಲವೊಂದು ಸಲ ಸತ್ಯಾಂಶವಿರುತ್ತದೆ. ನ್ಯಾಯವಿಲ್ಲದೆ ನಿಜವಾದ ಶಾಂತಿ ಇರಲಾರದು ಮತ್ತು ಪ್ರತಿಭಟನೆಯಿಲ್ಲದೆ ನ್ಯಾಯದೊರೆಯಲಾರದು. ಇಂದು ಕೇವಲ ನ್ಯಾಯವಷ್ಟೆ ಅಲ್ಲ, ನ್ಯಾಯದ ವಿಚಾರವೆ ಆಕ್ರಮಣಕ್ಕೆ ಒಳಗಾಗಿದೆ. ಸಮಾಜದ ದುರ್ಬಲ ವರ್ಗಗಳ ಮೇಲಂತೂ ಈ ಆಕ್ರಮಣ ಪರಿಪೂರ್ಣವಾಗಿ ನಡೆದಿದೆ. ಅದು ದಯಾಹೀನವೂ ಕುಚೋದ್ಯತನದಿಂದ ಕೂಡಿದುದೂ ಆಗಿದೆ. ಈ ಪ್ರಕಾರದ ಆಕ್ರಮಣದ ಪರಿಣಾಮವಾಗಿ ನ್ಯಾಯಕುರಿತಾದ ವ್ಯಾಖ್ಯೆಯೇ ತನ್ನ ಹರಿತವನ್ನು ಕಳೆದುಕೊಂಡಿದೆ. ನಮ್ಮ ದೂರದೃಷ್ಟಿ ಕುಂಠಿತಗೊಳ್ಳುವಂತೆಯೂ ಮಾಡಿದೆ. ಹಾಗೂ ನಮ್ಮ ನಿರೀಕ್ಷಣೆಗಳು ಬುಡಮೇಲಾಗುವಂತೆಯೂ ಮಾಡಿದೆ. ಒಳ್ಳೆಯ ಉದ್ದೇಶವನ್ನಿಟ್ಟುಕೊಂಡವರಲ್ಲಿಯೂ ಕೂಡ ನ್ಯಾಯದ ಬಗ್ಗೆ ಇರುವ ಅರ್ಥ ನಿಧಾನವಾಗಿ "ಮಾನವ ಅಧಿಕಾರ"ಗಳೆಂಬ ಅರ್ಥತಾಳುತ್ತಿದೆ. ನ್ಯಾಯದ ಈ ಹೊಸ ಅರ್ಥವಂತೂ ಇನ್ನೂ ಹೆಚ್ಚು ದುರ್ಬಲವಾಗಿದೆ. ಹೀಗಾಗಿರುವುದು ಭಯಾನಕವಾದ ಸಂಗತಿಯೇ ಸರಿ. ವಾಣಿಜ್ಯ ಸಂಸ್ಥೆಗಳಿಗೆ ನ್ಯಾಯ; ಆ ಸಂಸ್ಥೆಗಳ ದುರಾಸೆಗಳಿಗೆ ಬಲಿಯಾದವರಿಗೆ ಮಾನವ ಹಕ್ಕುಗಳು ! ಮಾನವಹಕ್ಕುಗಳ ಆಮಿಷ ದಯಪಾಲಿಸುವ ಅಮೇರಿಕನ್ನರಿಗೆ ನ್ಯಾಯ; ಅಫಘಾನರಿಗೂ, ಇರಾಕಿಗಳಿಗೂ ಮಾನವಹಕ್ಕುಗಳು. ಭಾರತದ ಮೇಲ್ವರ್ಗದ ಜಾತಿಗಳವರಿಗೆ ನ್ಯಾಯ; ದಲಿತರಿಗೂ, ಆದಿವಾಸಿಗಳಿಗೂ ಮಾನವಹಕ್ಕುಗಳು. ಶ್ವೇತವರ್ಣದ ಆಸ್ಟ್ರೇಲಿಯನ್ನರಿಗೆ ನ್ಯಾಯ; ಅಲ್ಲಿಯ ಆದಿವಾಸಿಗಳಿಗೆ ಮತ್ತು ವಲಸೆಗಾರರಿಗೆ ಮಾನವಹಕ್ಕುಗಳು. ಕೆಲವೊಂದು ಸಂದರ್ಭದಲ್ಲಿ ಮಾನವಹಕ್ಕುಗಳ ನಿರಾಕರಣೆಯೂ ಆಗುತ್ತದೆ. ಬಲಾತ್ಕಾರದ ಮತ್ತು ನ್ಯಾಯರಹಿತ ರಾಜಕಾರಣವನ್ನು ಮತ್ತು ಅನ್ಯಾಯದ ಆರ್ಥಿಕ ವ್ಯವಸ್ಥೆಯನ್ನು ಪ್ರಪಂಚದ ಮೇಲೆ ಹೇರುವುದಕ್ಕಾಗಿಯೇ ಮಾನವಹಕ್ಕುಗಳನ್ನು ಉಲ್ಲಂಘಿಸುವುದು ಸರ್ವೇಸಾಮಾನ್ಯವಾಗಿದೆಯೇನೊ ಎಂದು ದಿನಕಳೆದಂತೆ ಸ್ಪಷ್ಟವಾಗುತ್ತಿದೆ. ಅನೇಕ ಬಾರಿ ಮಾನವಹಕ್ಕುಗಳ ಉಲ್ಲಂಘನೆ ಈಗಾಗಲೆ ಜಗತ್ತು ಒಪ್ಪಿರುವ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಒಂದು ಆಕಸ್ಮಿಕ ಘಟನೆಯೆಂದೂ ಮತ್ತು ದುರಾದೃಷ್ಟಕರ ಫಲಿತಾಂಶವೆಂದೂ ಪ್ರತಿಬಿಂಬಿಸಲಾಗುತ್ತದೆ. ಅಲ್ಲದೆ ಇವೆಲ್ಲವು ಸಣ್ಣ ಸಮಸ್ಯೆಗಳು ಮಾತ್ರ. ಕೆಲವು ಸರ್ಕಾರೇತರ ಸಂಸ್ಥೆಗಳು ತಮ್ಮ ಹೆಚ್ಚಿನ ಗಮನ ಕೊಡುವುದರ

ಮೂಲಕ ಅವುಗಳನ್ನು ಪರಿಹರಿಸಬಹುದೆಂದು ಭಾವಿಸಲಾಗುತ್ತದೆ. ಈ ಕಾರಣಗಳಿಂದಲೆ ಕಾಶ್ಮೀರ ಮತ್ತು ಇರಾಕ್‌ಗಳಲ್ಲಿ ನಡೆದಿರುವಂಥ ಸಂಘರ್ಷದಲ್ಲಿ ಮಾನವಹಕ್ಕುಗಳ ಪ್ರತಿಪಾದಕರನ್ನು ಸಂಶಯದೃಷ್ಟಿಯಿಂದ ನೋಡಲಾಗುತ್ತಿದೆ. ಈಗ ಕೆಲ ವಾರಗಳ ಹಿಂದೆಯಷ್ಟೆ ಜಾನ್‌ಹೋವಾರ್ಡ್‌ರನ್ನು ಆಸ್ಟ್ರೇಲಿಯಾ ಚುನಾಯಿಸಿತು.ಆಸ್ಟ್ರೇಲಿಯಾ ಇರಾಕ್ ಮೇಲಿನ ಅಮೆರಿಕದ ಕಾನೂನುಬಾಹಿರ ದಾಳಿ ಮತ್ತು ಆಕ್ರಮಣದಲ್ಲಿ ಭಾಗಿಯಾಗುವಂತೆ ಇವರು ಮಾಡಿದ್ದರು. ಇರಾಕ್ ಮೇಲಿನ ಅಮೆರಿಕದ ದಾಳಿ ಇತಿಹಾಸದಲ್ಲಿ ಅತ್ಯಂತ ಹೇಡಿತನದ ಯುದ್ಧವೆಂಬ ಹೆಸರಿನಲ್ಲಿ ದಾಖಲೆಗೊಳ್ಳುವುದು. ಪ್ರಪಂಚದ ಶ್ರೀಮಂತ ರಾಷ್ಟ್ರಗಳ ಸಮೂಹವೊಂದು ವಿಶ್ವವನ್ನು ಅನೇಕ ಬಾರಿ ಹಾಳು ಮಾಡಬಹುದಾದಷ್ಟು ದೊಡ್ಡ ಪ್ರಮಾಣದಲ್ಲಿ ನ್ಯೂಕ್ಲಿಯರ್ ಆಯುಧಗಳನ್ನು ಹೊಂದಿದೆ. ಇರಾಕ್ ನಂಥ ಒಂದು ಬಡರಾಷ್ಟ್ರ ನ್ಯೂಕ್ಲಿಯರ್ ಆಯುಧಗಳನ್ನು ಹೊಂದಿದೆಯೆಂದು ಅದರ ಮೆಲೆ ಸುಳ್ಳು ಆರೋಪ ಹೊರಿಸಿ ಆ ದೇಶದ ಮೇಲೆ ಮುಗಿಬಿದ್ದವು. ಇರಾಕ್ ತನ್ನ ಶಸ್ತ್ರಾಸ್ತ್ರಗಳನ್ನು ಕಳಚುವಂತೆ ಆ ದೇಶದ ಮೇಲೆ ಒತ್ತಾಯ ತರುವುದಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘವನ್ನೂ ಬಳಸಿಕೊಂಡವು. ನಂತರ ಆ ದೇಶದ ಮೆಲೆ ದಾಳಿ ಮಾಡಿದವು, ಆಕ್ರಮಿಸಿದವು ಮತ್ತು ಈಗ ಆ ದೇಶವನ್ನೇ ಮಾರುವ ಹೊಂಚು ಹಾಕಿವೆ. ಇರಾಕ್ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆಂಬ ಕಾರಣಕ್ಕಾಗಿ ನಾನು ಮಾತನಾಡುತ್ತಿಲ್ಲ.ಆ ದೇಶದ ಮೇಲೆ ನಡೆದಂಥ ಘಟನೆಗಳು ಮುಂಬರುವ ಭೀಕರ ಸೂಚನೆಗಳ ಕಣ್ಸನ್ನೆಯಾಗಿರುವುದರಿಂದ ಆ ದೇಶದ ಬಗ್ಗೆ ಮಾತನಾಡುತ್ತಿದ್ದೇನೆ.ಇರಾಕಿನಿಂದ ಹೊಸ ಘಟನಾವಳಿಗಳ ವರ್ತುಲವೊಂದು ಪ್ರಾರಂಭವಾಗಿದೆ.ಆ ಘಟನಾವಳಿ ವಾಣಿಜ್ಯ ಜಗತ್ತಿನ ಸೈನ್ಯಶಕ್ತಿಯ ನಗ್ನ ಪ್ರದರ್ಶನವಾಗಿದೆ. ಹೀಗಾಗಿ ಈಗ ಆ ದೇಶಗಳ ಮುಖವಾಡ ಕಳಚಿದೆ.

ವಿಶ್ವದ ಸಂಪನ್ಮೂಲಗಳನ್ನು ನಿಯಂತ್ರಿಸುವ ಬಗ್ಗೆ ಹೋರಾಟ ತೀವ್ರಗೊಳ್ಳುತ್ತಾ ಹೋದಂತೆ ಸೈನ್ಯಾಚರಣೆಯ ಮೂಲಕ ಆರ್ಥಿಕವಸಾಹತುಶಾಹಿ ಪುನಃ ತನ್ನ ತಲೆ ಎತ್ತುತ್ತಿದೆ. ಇರಾಕ್ ದೇಶ
ವಾಣಿಜ್ಯದ ವಿಶ್ವೀಕರಣದ ಅಂತಿಮ ಗುರಿಯಾಗಿದೆ. ಅಲ್ಲಿ ಹೊಸ ವಸಾಹತುಶಾಹಿ ಮತ್ತು ಹೊಸ ಉದಾರೀಕರಣಗಳ ಸಂಲಗ್ನವಾಗಿದೆ. ರಕ್ತ ಸಿಂಚಿತ ತೆರೆಯಾಚೆಗೆ ಇರುವುದನ್ನು ನಾವು ನೋಡಬಲ್ಲೆವಾದರೆ ನಮಗೆ ಅನೇಕ ದಯಾಹೀನ ವ್ಯವಹಾರಗಳು ರೂಪಗೊಳ್ಳುತ್ತಿರುವುದು ಕಂಡು ಬರುತ್ತದೆ. ದಾಳಿಗೆ ತುತ್ತಾಗಿ ಆಕ್ರಮಣಕ್ಕೆ ಒಳಗಾಗಿರುವ ಇರಾಕ್ ದೇಶವು ಅಮೇರಿಕಾಕ್ಕೆ ೨೭೦ ದಶಲಕ್ಷ ಡಾಲರ್‌ಗಳನ್ನು ಕೊಡುವಂತೆ ಮಾಡಲಾಯಿತು.ಈ ಹಣ ಹ್ಯಾಲಿಬರ್ಟೋನ್, ಶೆಲ್,ಮೊಬೈಲ್, ನೆಶ್ಲೆ, ಪೆಪ್ಸಿ,ಕೆಂಟುಕಿ ಈ ಮುಂತಾದ ಕಂಪನಿಗಳು ಅನುಭವಿಸಿದ ನಷ್ಟ ಪರಿಹಾರಕ್ಕಾಗಿ ಸಂಬಂಧಿಸಿದ್ದಾಗಿತ್ತು.ಈ ಭಾರಿ ಮೊತ್ತದೊಂದಿಗೆ ೧೨೫೦ ಕೋಟಿ ಅಮೇರಿಕನ್

ಡಾಲರನಷ್ಟು ವಿದೇಶಿ ಸಾಲವನ್ನು ಸಹ ಇರಾಕ್ ತನ್ನ ತಲೆಯ ಮೇಲೆ ಹೊತ್ತುಕೊಳ್ಳುವಂತೆಯೂ ಆಯಿತು. ಈ ಹಣದ ಮುಗ್ಗಟ್ಟಿನ ಕಾರಣದಿಂದಾಗಿ ವಿಧಿಯಿಲ್ಲದೆ ಇರಾಕ್ ಅಂತಾರಾಷ್ಟ್ರೀಯ ಹಣಕಾಸಿನ ಸಂಸ್ಥೆಯತ್ತ ಕೈ ಚಾಚುವಂತಾಯಿತು. ಈ ನಿಧಿಯೋ "ಹೆಣವನ್ನು ಅರಸುವ ಹದ್ದಿನಂತೆ" ಕಾದು ಕುಳಿತಿತ್ತು.ಆ ನಿಧಿ ಇರಾಕ್‌ನಲ್ಲಿ ತನ್ನ ಸಾಲದ ಎಲ್ಲ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಪ್ರಯತ್ನಿಸಿತು.ಆದರೆ ಇರಾಕಿನಲ್ಲಿ ಯಾವುದೇ ಬಗೆಯ ವ್ಯವಹಾರಗಳೇ ಉಳಿದಿಲ್ಲವಲ್ಲ! ಅಂದ ಮೇಲೆ ಈ ಅನಾಗರಿಕ ಹಾಗು ಎಲ್ಲೆಲ್ಲೂ ಸೈನ್ಯೀಕರಣಗೊಂಡ ವಿಶ್ವದಲ್ಲಿ ಶಾಂತಿಯ ಅರ್ಥವೇನು? ತ್ವರಿತಗತಿಯಲ್ಲಿ ತಮ್ಮ ಸಂಪನ್ಮೂಲಗಳನ್ನು ಕಳೆದುಕೊಳ್ಳುತ್ತಿರುವ ಬಡವರಿಗೆ ಶಾಂತಿಯ ಅರ್ಥವೇನು? ಅವರಿಗೆ ಶಾಂತಿಯೇ ಯುದ್ಧವಾಗಿ ಪರಿಣಮಿಸುತ್ತದೆ. ಸಾಮ್ರಾಜ್ಯಗಳಿರುವ ಈ ಯುಗದಲ್ಲಿ ಯುದ್ಧಗಳಿಂದ ಯಾರಿಗೆ ಪ್ರಯೋಜನಗಳಿವೆಯೆಂದು ನಮ್ಮೆಲ್ಲರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಈ ಸಂದರ್ಭದಲ್ಲಿ ಶಾಂತಿಯಿಂದ ಯಾರು ಪ್ರಯೋಜನ ಪಡೆಯುತ್ತಾರೆಂಬ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ನಮಗೆ ನಾವೇ ಹಾಕಿಕೊಳ್ಳಬೇಕು. ಯುದ್ಧ ಬಯಸುವುದು ಅಪರಾಧವೇನೋ ನಿಜ. ಆದರೆ ನ್ಯಾಯವನ್ನು ಬದಿಗೊತ್ತಿ ಶಾಂತಿಯ ಮಾತನ್ನಾಡುವುದು ಒಂದು ರೀತಿಯ ಕರಾರುಬದ್ಧ ಶರಣಾಗತಿ ಅಲ್ಲವೇ? ಅನ್ಯಾಯವನ್ನು ಮುಂದುವರೆಸಿಕೊಂಡು ಹೋಗುವ ಸಂಸ್ಥೆ ಮತ್ತು ಪದ್ಧತಿಗಳನ್ನು ಬಯಲಿಗೆಳೆಯದೆ ನ್ಯಾಯದ ಕುರಿತು ಮಾತನಾಡುವುದು ಗೋಮುಖವ್ಯಾಘ್ರತನವಾಗಿರುತ್ತದೆ. ಬಡತನದಲ್ಲಿರುವುದಕ್ಕಾಗಿ ಬಡವರನ್ನು ದೂಷಿಸುವುದು ಸುಲಭ. ವೇಗವಾಗಿ ಹೆಚ್ಚುತ್ತಿರುವ ಭಯೋತ್ಪಾದಕತೆ ಮತ್ತು ಯುದ್ಧದ ಸುಳಿಯಲ್ಲಿ ವಿಶ್ವ ಸಿಕ್ಕಿಹಾಕಿಕೊಳ್ಳುತ್ತಿರುವುದನ್ನು ನಾವು ಸುಲಭವಾಗಿ ತಿಳಿಯಬಹುದು. ಈ ಪರಿಸ್ಥಿತಿಯ ಕಾರಣದಿಂದಾಗಿಯೇ ಅಲ್ಲವೇ "ನೀವು ನಮ್ಮೊಂದಿಗಿರಿ ಇಲ್ಲವೆ ಭಯೋತ್ಪಾದಕರೊಂದಿಗಿರಿ" ಎಂಬುದಾಗಿ ಜಾರ್ಜ್ ಬುಷ್ ಹೇಳಿದ್ದು. ನಿಮ್ಮ ಆಯ್ಕೆ ಯಾವುದೇ ಇರಲಿ ಆ ಆಯ್ಕೆಗಳು ಸತ್ಯಕ್ಕೆ ದೂರವಾಗಿರುತ್ತವೆ. ಭಯೋತ್ಪಾದ ಕತೆಯೆಂಬುದು ಯುದ್ಧದ ಖಾಸಗೀಕರಣವೇ ಆಗಿದೆ. ಭಯೋತ್ಪಾದಕರು ಯುದ್ಧವೆಂಬ ವಸ್ತುವಿನ ಸ್ವಚ್ಛಂದ ಮಾರಾಟಗಾರರಾಗಿದ್ದಾರೆ. ಹಿಂಸೆಯೆಂಬುದು ಕೇವಲ ರಾಜ್ಯಕ್ಕೆ ಸಂಬಂಧಿಸಿದ ವಿಷಯವಲ್ಲ. ಹೀಗೆಂದು ಭಯೋತ್ಪಾದಕರು ನಂಬಿದ್ದಾರೆ. ಭಯೋತ್ಪಾದಕತೆಯ ಅವರ್ಣನೀಯ ಕ್ರೂರತೆ ಮತ್ತು ಯುದ್ಧದ ಅತಿರೇಕದ ರಕ್ತಪಾತ ಇವುಗಳೆರಡರ ಮಧ್ಯದಲ್ಲಿ ನೈತಿಕ ವರ್ಗೀಕರಣ ಕೇವಲ ತೋರಿಕೆಯದಾಗುತ್ತದೆ. ಈ ಎರಡೂ ಪ್ರಕಾರದ ಹಿಂಸೆಗಳು ಯಾವ ರೀತಿಯಲ್ಲೂ ಒಪ್ಪಿಗೆಯಾಗಲು ಸಾಧ್ಯವಿಲ್ಲ. ಒಂದನ್ನು ಬೆಂಬಲಿಸಿ ಇನ್ನೊಂದನ್ನು ಖಂಡಿಸಲಾರೆವು.

ಸಾಭಾರ– ಸಿಡ್ನಿ ಮಾರ್ನಿಂಗ್ ಹೆರಾಲ್ಡ್

ಅನು– ಸು. ಕೌ.

ಅರಾಫತ್‌ರ ಆತ್ಮಕ್ಕೆ ಶಾಂತಿಕೋರಿ

–ಶಾರದಾ ಗೋಪಾಲ

(ಪ್ಯಾಲಿಸ್ತೇನಿನ ಜನರ ಜೀವಿಸುವ ಹಕ್ಕುಗಳಿಗಾಗಿ ಜೀವ ತೇದವರು ಅರಾಫತ್. ಅವರ ಆತ್ಮಕ್ಕೆ ಶಾಂತಿಸಿಗಬೇಕೆಂದರೆ ಪ್ಯಾಲಿಸ್ತೇನಿಯರಿಗೆ ಅವರ ಹಕ್ಕುಗಳು ದೊರೆಯಬೇಕು.)

ಅರಾಫತರು ಅಮರರಾಗಿದ್ದಾರೆ. ಜೀವನ್ಮರಣಗಳ ಉಯ್ಯಾಲೆಯಲ್ಲಿ ಬಹುಕಾಲ ತೊಳಲಾಡಿ ಜೀವ ತೊರೆದಿರುವ ಅವರು ಮಾನವ ಹಕ್ಕುಗಳ ಪ್ರತಿಪಾದಕರಿಗೆ, ಸ್ವಾತಂತ್ರ್ಯ ಪ್ರೇಮಿಗಳಿಗೆ ಎಂದೂ ಮರೆಯದ ನೆನಪುಗಳನ್ನು ಬಿಟ್ಟು ನಡೆದಿದ್ದಾರೆ. ಪ್ಯಾಲಿಸ್ತೇನಿಯರನ್ನೂ, ಅವರ ನಾಯಕ ಅರಾಫತ್‌ರನ್ನೂ ಕಸದ ತೊಟ್ಟಿಗೆ ಒತ್ತಿ ಬಿಡುವ ಇಸ್ರೇಲಿಗಳ ಎಲ್ಲಾ ಪ್ರಯತ್ನಗಳನ್ನೂ ವಿಫಲಗೊಳಿಸಿದವರು ಅರಾಫತ್. ಅವರ ಆ ಹೋರಾಟ, ಅಪೂರ್ಣವಾಗಿದ್ದರೂ ಇತಿಹಾಸದ ಪುಟಗಳಲ್ಲಿ ದಪ್ಪಕ್ಷರಗಳಲ್ಲಿ ಬರೆದಿಡುವಂತಹದ್ದು. ಪ್ಯಾಲಿಸ್ತೇನಿಯರ ರಾಷ್ಟ್ರೀಯ ಚಳುವಳಿಯನ್ನು ಹುಟ್ಟು ಹಾಕಿದವರು ಆತ. ಇನ್ನು ಮುಂದಾದರೂ ಪ್ಯಾಲಿಸ್ತೇನಿಯರಿಗೆ ಅವರ ಹಕ್ಕುಗಳು ದೊರೆಯಬೇಕೆಂದರೆ ಮುಂಬರುವ ನಾಯಕರು ಅರಾಫತ್ ರ ಜೀವನ ಪುಟಗಳಿಂದ ಕಲಿಯಬೇಕಾದ್ದು ಬಹಳವಿದೆ.

ಪ್ಯಾಲಿಸ್ತೇನ್ ಅರಬ್ ಜನರ ಒಂದು ಪುಟ್ಟ ದೇಶವಾಗಿತ್ತು. ನೂರಾರು ವರ್ಷಗಳ ಹಿಂದೆ ಇಸ್ರೇಲ್ ಇದ್ದ ಜಾಗದಲ್ಲಿ ಆಗಿನ ಕಾಲದ ದಾಳಿ, ಯುದ್ಧ, ಆಕ್ರಮಣಗಳಿಂದ ಬಂದು ನೆಲೆಸಿದ ಅರಬ್ಬರು ಅವರು. ಹಿಟ್ಲರನ ಕಾಲದಲ್ಲಿ ಚೆಂದಿ ಚೂರಾಗಿ ಹರಿದು ಹಂಚಿಹೋಗಿ ಜಗತ್ತಿನ ಎಲ್ಲೆಲ್ಲೋ ನೆಲೆಸಿದ್ದ ಯಹೂದಿಗಳು ತಮ್ಮ ದೇಶವು ತಮಗೆ ಬೇಕೆಂದಾಗ ವಿಶ್ವಸಂಸ್ಥೆಯು ಆ ಬೇಡಿಕೆಯನ್ನು ಮನ್ನಿಸಿ ೧೯೪೮ ರಲ್ಲಿ ಪ್ಯಾಲಿಸ್ತೇನನ್ನು ಒಡೆದು ಇಸ್ರೇಲ್ ದೇಶಕ್ಕೆ ಮರು ಜನ್ಮವನ್ನು ಕೊಟ್ಟಿತು. ಮೂಲತಃ ಅಮೇರಿಕಾದಿಂದ ಮರಳಿ ತಮ್ಮ ತಾಯ್ನಾಡಿಗೆ ಬಂದ ಇಸ್ರೇಲಿಗಳ ಮನದಲ್ಲಿ ಎಂದೂ ಆರದ ದ್ವೇಷ. ತಮ್ಮನ್ನು ಹೊಸಕಿ ಹಾಕಿದ ಹಿಟ್ಲರನೇ ಅವರ ಆದರ್ಶವಾಗಿದ್ದುದು ದೊಡ್ಡ ದುರಂತ. ಅಮೆರಿಕಾದ ಅತ್ಯುನ್ನತ ಶಸ್ತ್ರಾಸ್ತ್ರಗಳ ಕೈಗಾರಿಕೆಯೇ ಯಹೂದಿಗಳ ಕೈಲಿರುವುದರಿಂದ ಜಗತ್ತನ್ನೆಲ್ಲ ಕುಣಿಸುವ ಅಮೆರಿಕಾದ ಜುಟ್ಟು ಇರುವುದೂ ಯಹೂದಿಗಳ ಕೈಯ್ಯಲ್ಲೇ. ಜಗತ್ತಿನಲ್ಲಿಯೇ ಅತಿ ಬುದ್ಧಿವಂತರೆನಿಸಿದ ಯಹೂದಿಗಳು ಇಂದು ಅತ್ಯಂತ ಕ್ರೂರ ಜನರೂ ತಾವೆಂದು ಇಸ್ರೇಲಿನಲ್ಲಿ ತೋರಿಸಿಕೊಡುತ್ತಿದ್ದಾರೆ. ಇಸ್ರೇಲ್ ದೇಶದ ರಚನೆ ಆಗುತ್ತಲೇ ಅವರು ಪ್ಯಾಲಿಸ್ತೇನಿಯರ ಮೇಲೆ ಅತ್ಯಾಚಾರ ಆರಂಭಿಸಿಯೇ ಬಿಟ್ಟರು. ಪ್ಯಾಲಿಸ್ತೇನಿಯರೆಂದರೆ

ಯಾರು ಅವರೇಕೆ ಇರಬೇಕು ಎಂಬುದೇ ಅವರ ಪ್ರಶ್ನೆ. ತಮ್ಮ ದೇಶದ ಗಡಿಯನ್ನು ಸತತವಾಗಿ ವಿಸ್ತರಿಸುತ್ತ ಪ್ಯಾಲಿಸ್ತೇನಿಯರನ್ನು ಹತ್ತಿಕ್ಕುತ್ತ ನಡೆದಿದ್ದಾರೆ ಇಸ್ರೇಲಿಗಳು. ಲಕ್ಷಾಂತರ ಜನರನ್ನು ದೇಶ ಬಿಟ್ಟೋಡಿಸಿ ಅವರ ನೆಲದಲ್ಲಿ ತಮ್ಮ ಬಂಗಲೆಗಳನ್ನೆಬ್ಬಿಸಿದ್ದಾರೆ. ಸುತ್ತಲಿನ ಸಿರಿಯಾ, ಲೆಬನಾನ್ ದೇಶಗಳ ನಿರಾಶ್ರಿತ ಶಿಬಿರದಲ್ಲಿ ಐವತ್ತು ವರ್ಷಗಳಿಂದಲೂ ಜೀವನ ಸವೆಸುವ ಕರ್ಮ ಆ ಪ್ಯಾಲಿಸ್ತೇನಿಯರಿಗೆ.

ಈಜಿಪ್ತಿನ ಕೈರೋದಲ್ಲಿ ಜನಿಸಿದ ಅರಾಫತ್ ಅರವತ್ತನೇ ದಶಕದಲ್ಲಿ ಪ್ಯಾಲಿಸ್ತೇನಿಯರ ಆಶಾಕಿರಣವಾಗಿ ಜನನಾಯಕರಾಗಿ ಹೊರಹೊಮ್ಮಿದರು. ಪ್ಯಾಲಿಸ್ತೇನ್ ವಿಮೋಚನಾ ರಂಗವನ್ನು ಕಟ್ಟಿ ಇಸ್ರೇಲಿಗಳ ಮೇಲೆ ಗೆರಿಲ್ಲಾ ದಾಳಿಯನ್ನು ಆರಂಭಿಸಿದಾಗ ನಿರಾಶೆಯ ಕತ್ತಲ ಕೂಪದಲ್ಲಿ ದಾರಿಗಾಣದೆ ಕುಳಿತಿದ್ದ ಪ್ಯಾಲಿಸ್ತೇನಿಯರಿಗೆ ೧೯೬೪ ರಲ್ಲಿ ಪಿ.ಎಲ್.ಓ. ಒಂದು ಭರವಸೆಯನ್ನು, ಜೀವಿಸುವ ಆಸೆಯನ್ನು ಹುಟ್ಟಿಸಿತು.

ಮೊದಲು ಪ್ಯಾಲಿಸ್ತೇನ್ ವಿಮೋಚನಾ ರಂಗಕ್ಕೆ ಅರಬ್ಬರೆಲ್ಲ ಬೆಂಬಲ ಕೊಟ್ಟರಾದರೂ ತಮ್ಮಲ್ಲಿರುವ ನಿರಾಶ್ರಿತ ಶಿಬಿರಗಳ ಜನರೇ ಸ್ವಾತಂತ್ರ್ಯಗಳಿಸಲು ಹೋರಾಡುತ್ತಿದ್ದಾರೆಂಬ ಗುಮಾನಿ
ಬಂದಾಗ ಅರಬ್ ದೇಶಗಳಲ್ಲಿ ಸಹ ಅರಾಫತ್‌ರ ಗುಂಪಿನ ಬಗ್ಗೆ ಭಯ ಹುಟ್ಟಿತು. ಇಸ್ರೇಲ್ ಕೂಡ ಒಡೆದು ಆಳುವ ಬುದ್ಧಿ ತೋರಿಸಿತು. ಹೀಗಾಗಿ ಲೆಬೆನಾನ್, ಜೋರ್ಡಾನ್‌ಗಳಿಂದ ಕಾಲ್ಕಿತ್ತು ಅರಾಫತರು ಪ್ಯಾಲಿಸ್ತೇನ್‌ಗೇ ಬರಬೇಕಾಯ್ತು. ಇಂದು ಪ್ಯಾಲಿಸ್ತೇನ್ ಎಂದರೆ ಜೋರ್ಡಾನ್ ನದಿಯ ಪಶ್ಚಿಮ ದಂಡೆ ಮತ್ತು ಗಾಝಾ ಪಟ್ಟಿಯೆಂಬ ಎರಡು ತುಂಡು ಭೂಮಿ ಮಾತ್ರ. ಅಲ್ಲಿಂದಲೂ ಅವರನ್ನು ಹೊಸಕಿ ಹಾಕುವ ಇಸ್ರೇಲ್ ಪ್ರಯತ್ನ ನಡೆದೇ ಇದೆ.

೧೯೭೦ ರಿಂದ ೧೯೮೨ರ ಮಧ್ಯೆ ಅರಾಫತ್‌ರ ಹೋರಾಟಕ್ಕೆ ಇಡೀ ಜಗತ್ತಿನ ಮನ್ನಣೆ ಸಿಕ್ಕಿತು. ಒಂದು ದೇಶದ ಜನರು ಜೀವಿಸುವ ಹಕ್ಕಿನ ಹೋರಾಟವದು. ಒಂದೆರಡು ವರ್ಷಗಳ ಹೋರಾಟವಲ್ಲ; ಐದು ದಶಕಗಳೇ ಸಂದಿದ್ದರೂ ಇನ್ನೂ ಪರಿಹಾರ ಸಿಗದಿರುವಂಥ ಹೋರಾಟವದು. ೮೦ ರ ದಶಕದಲ್ಲಂತೂ ಇಸ್ರೇಲ್ ದೇಶಕ್ಕೆ ಸಿಕ್ಕ ಮಾನ್ಯತೆಗಿಂತ ಹೆಚ್ಚು ಮನ್ನಣೆ ಪ್ಯಾಲಿಸ್ತೇನಿನ ಹೋರಾಟಕ್ಕೇ ಲಭಿಸಿತು.

ಅಲ್ಲಿಂದಿಲ್ಲಿಯವರೆಗೆ ಎಷ್ಟೋ ಹೆಣಗಳುರುಳಿವೆ . ಮಧ್ಯ ಪೂರ್ವದಲ್ಲಿ ರಕ್ತದ ಹೊಳೆಯೇ ಹರಿದಿದೆ. ಒಮ್ಮೆ ಹಿನ್ನೆಡೆ, ಒಮ್ಮೆ ಗೆಲುವು. ಒಮ್ಮೆ ಇಸ್ರೇಲಿಗಳ ಟ್ಯಾಂಕರ್ ದಾಳಿ, ಮತ್ತೊಮ್ಮೆ ಪ್ಯಾಲಿಸ್ತೇನಿಯರ ಗೆರಿಲ್ಲಾ ದಾಳಿ. ಪ್ಯಾಲಿಸ್ತೇನಿಯರ ಮಾನವ ಹಕ್ಕುಗಳನ್ನು ಗೌರವಿಸಬೇಕೆಂದು ಇಸ್ರೇಲಿನ ಮೇಲೆ ಜಾಗತಿಕ ಮುಖಂಡರು ಒತ್ತಡ ತಂದಿದ್ದು ಅದೆಷ್ಟು ಬಾರಿಯೋ. ಒಪ್ಪಂದ, ಶಾಂತಿ ಮಾತುಕತೆಗಳು, ಸಹಿಗಳು ಆದದ್ದಿನ್ನೆಷ್ಟು ಸಲವೋ. ಕಡೆಗೆ ಶಾಂತಿ ಮಾತುಕತೆಗಾಗಿ ಇಸ್ರೇಲಿನ ಪ್ರಧಾನಿಗೂ

ಅರಾಫತ್‌ರಿಗೂ ನೊಬೆಲ್ ಶಾಂತಿ ಪ್ರಶಸ್ತಿಯನ್ನೂ ಕೊಟ್ಟು ನೋಡಿದ್ದಾಯಿತು. ಯಾವುದಕ್ಕೂ ಬಗ್ಗುವುದಿಲ್ಲ ಅಲ್ಲಿನ ರಣ ನೀತಿ. ಹಿಂದಿನ ದಿನ ಒಪ್ಪಂದ, ಮರುದಿನ ಮತ್ತೆ ದಾಳಿ ಪ್ರತಿ ದಾಳಿಗಳು. ಇಸ್ರೇಲ್ ಶ್ರೀಮಂತ ದೇಶ. ಅಮೇರಿಕಾದ ತನುಮನಧನಗಳ ಬೆಂಬಲವೇ ಅದಕ್ಕಿದೆ. ಅಮೆರಿಕಾವನ್ನೇ ಕುಣಿಸಬಲ್ಲ ಮಣಿಸಬಲ್ಲ ಶಕ್ತಿ ಅದಕ್ಕಿದೆ. ಪ್ಯಾಲಿಸ್ತೇನಿಯರಿಗಿರುವುದೇನು? ಏನೂ ಇಲ್ಲ. ಟ್ಯಾಂಕರುಗಳ ಮುಂದೆ ಹಾದಿಯಲ್ಲಿಬಿದ್ದ ಕಲ್ಲನ್ನೇ ಬೀಸಿ ಎಸೆದು ಪ್ರತಿದಾಳಿ ಮಾಡಬೇಕಷ್ಟೆ. ಬುಲ್ಡೋಝರ್ ತಂದು ಪ್ಯಾಲಿಸ್ತೇನಿಯರ ಮನೆ, ಹೊಲ, ರಸ್ತೆ ಎನ್ನದೆ ಒಂದೊಂದೆ ಊರನ್ನೇ ನೆಲಸಮ ಮಾಡಿ ಅಲ್ಲಿ ತಮ್ಮ ಬಹುಮಹಡಿ ಕಟ್ಟಡಗಳನ್ನು ಕಟ್ಟಿದರು ಇಸ್ರೇಲಿಗಳು. ದೇಶ ದೇಶಗಳಲ್ಲಿ ಹಂಚಿ ಹೋಗಿದ್ದ ಯಹೂದಿಗಳನ್ನು 'ತಾಯ್ನಾಡಿಗೆ ಬನ್ನಿ' ಎಂದು ಕರೆದು ಆ ಕಟ್ಟಡಗಳಲ್ಲಿ ತುಂಬಿದರು. ಅವರ ರಕ್ಷಣೆಗಾಗಿ ಸುತ್ತಲೂ ಸೈನ್ಯವನ್ನು ನಿಲ್ಲಿಸಿದರು. ಹಳ್ಳಿ ಹಳ್ಳಿಗಳ ಮಧ್ಯೆ, ಪೇಟೆ ಹಳ್ಳಿಗಳ ಮಧ್ಯೆ ತಮ್ಮ ಟ್ಯಾಂಕರ್ ನಿಲ್ಲಿಸಿ ಅವರ ಸಂಪರ್ಕವನ್ನೆಲ್ಲ ಕಡಿದು ಹಾಕಿದರು. ಕೆಲಸಕ್ಕಾಗಿ, ವ್ಯಾಪಾರಕ್ಕಾಗಿ ಹೋಗುತ್ತಿದ್ದವರನ್ನೆಲ್ಲ 'ಸೆಕ್ಯೂರಿಟಿ ಕಾರಣಕ್ಕಾಗಿ' ತಡೆದು ಅವರ ಹೊಟ್ಟೆ ಪಾಡನ್ನೇ ಕತ್ತರಿಸಿ ಹಾಕಿದರು ಇಸ್ರೇಲಿಗಳು. ೧೯೯೩ ರಿಂದ ೧೯೯೯ ರವರೆಗೆ ಪ್ಯಾಲಿಸ್ತೇನಿಯರನ್ನು ಬದಿಗೊತ್ತಿ ಒಳಹೊಕ್ಕು ತುಂಬಿಕೊಂಡ ಇಸ್ರೇಲಿಗಳ ಸಂಖ್ಯೆ ನಾಲ್ಕು ಲಕ್ಷವನ್ನು ಮೀರಿತ್ತು.

ತಮ್ಮ ಹಳ್ಳಿಗಳು ನೆಲಸಮವಾದಾಗ,ಎಲ್ಲ ಪ್ಯಾಲಿಸ್ತೀನಿಯರಂತೆ ಸ್ವತಃ ಅರಾಫತ್‌ರೂ ದಿಕ್ಕು ತಪ್ಪಿದಂತಾದದ್ದು ನಿಜ. ಒಂದಾದ ಮೇಲೊಂದು ಪುನರ್ವಸತಿ ಮಹಡಿಗಳು ಏಳುತ್ತ ಹೋಗುವುದನ್ನು ಅಸಹಾಯಕರಾಗಿ ನೋಡುತ್ತ ನಿಂತಾಗ ಉಗ್ರಗಾಮಿ 'ಹಾಮಾಸ್' ಗುಂಪು ತಯರಾಗಬೇಕಾಯ್ತು.ನವ ತರುಣರನ್ನು, ಇನ್ನೂ ಮೀಸೆ ಚಿಗುರದವರನ್ನು ಮಾನವ ಬಾಂಬ್‌ಗಳಾಗಿ ತಯಾರು ಮಾಡಿ ಇಸ್ರೇಲಿನ ಜನನಿಬಿಡ ಕ್ಲಬ್ಬುಗಳಲ್ಲಿ, ಬಸ್ಸು ಕಾರುಗಳಲ್ಲಿ ಸಿಡಿಸಲು ಶುರುಮಾಡಿದರು. ಇದಕ್ಕೂಕೂಡ ಅರಾಫತ್‌ರು ಏನೂ ಮಾಡಲಾರದಾದರು.

ನಿರಾಶ್ರಿತ ಶಿಬಿರದ ಮೇಲೆ ದಾಳಿ ಮಾಡಿ ಜನರನ್ನು ಕೊಚ್ಚಿ ಕೊಚ್ಚಿ ಹಾಕಿದ್ದ ಸೇನಾ ದಂಡನಾಯಕ ಏರಿಯಲ್ ಶರೋನ್‌ನೇ ದೇಶದ ಪ್ರಧಾನಿಯಾದ ಮೇಲಂತೂ ಅಲ್ಲಿ ಶಾಂತಿಗೆ ಜಾಗವೇ ಉಳಿದಿರಲಿಲ್ಲ. ಅವರಿಂದ ಟ್ಯಾಂಕರ್ ದಾಳಿ, ಇವರಿಂದ ಮಾನವ ಬಾಂಬ್ ಸ್ಫೋಟ..... ಪ್ರತಿ ನಿತ್ಯವೂ ಹೆಣದ ಮೇಲೆ ಹೆಣಗಳು, ಮನೆಯ ಮೇಲೆ ಮನೆ ಉರುಳುತ್ತಲೇ ಹೋಯಿತು. "ಈ ದಾಳಿ ನಿಲ್ಲಿಸಿ ನಮ್ಮೊಂದಿಗೆ ಮತುಕತೆಗೆ ಬನ್ನಿ" ಎಂದು ಅರಾಫತ್‌ರು ಕೇಳುವುದು ಬಾಂಬ್, ಟ್ಯಾಂಕರುಗಳ ಗದ್ದಲದಲ್ಲಿ ಯಾರಿಗೂ ಕೇಳಿಸುತ್ತಲೇ ಇರಲಿಲ್ಲ.

ಒಂದೊಂದು ಮಾನವ ಬಾಂಬ್ ಸ್ಫೋಟಿಸಿದಾಗಲೂ ಏರಿಯಲ್ ಶಾರೋನ್ ಕೆಂಡಾಮಂಡಲ. ಇನ್ನಷ್ಟು ಉಗ್ರವಾದ, ಹೈಟೆಕ್ ಪ್ರತಿದಾಳಿ. ಬಾಯಲ್ಲಿ ಶಾಂತಿಯ

ಮಾತು, ಮರು ಬೆಳಗ್ಗೆಯೇ ಟ್ಯಾಂಕರ್ ದಾಳಿ. ಕಡೆಗೆ ಅರಾಫತ್‌ರ ಮನೆ, ಆವರಣವನ್ನೆಲ್ಲ ಕೆಡವಿಹಾಕಲಿಕ್ಕೂ ಟ್ಯಾಂಕರ್ ಕಳಿಸಿದ ಶಾರೋನ್. 'ಸತ್ತರೆ ಇಲ್ಲೇ ಸಾಯುವೆ' ಎಂದು ಅರಾಫತ್ ತಮ್ಮ ಮನೆ ಬಿಟ್ಟು ಹೊರಬರಲಿಲ್ಲ. ೨೦೦೦ ನೇ ಇಸ್ವಿಯಿಂದಲೂ ಅವರು ತಮ್ಮ ಮನೆ, ಆವರಣ ಬಿಟ್ಟು ಹೊರಬರಲಿಲ್ಲ. ಇಸ್ರೇಲ್ ಅವರಿಗೆ ದಿಗ್ಬಂಧನ ಹಾಕಿತ್ತು. ಒಳ್ಳೆಯ ಆಹಾರ, ಉತ್ತಮ ವಾತಾವರಣ ಒಂದೂ ಇಲ್ಲದೆ ಕಂಗೆಟ್ಟ ಅರಾಫತ್‌ರಿಗೆ ಪದೇ ಪದೇ ಆರೋಗ್ಯ ಕೆಡತೊಡಗಿತು. ಔಷಧ, ಚಿಕಿತ್ಸಾ ಸೌಲಭ್ಯಗಳೂ ಸಿಗದೆ ಅರಾಫತ್‌ರು ಕ್ಷೀಣಿಸತೊಡಗಿದರು. ಆದರವರ ಮನಸ್ಥೈರ್ಯ ಮಾತ್ರ ಕುಗ್ಗಿರಲಿಲ್ಲ. ಕ್ಯಾನ್ಸರ್‌ನಿಂದಾಗಿ ಅವರು ಬದುಕುಳಿಯುವ ಸಾಧ್ಯತೆಯೇ ಕಡಿಮೆಯಾದಾಗ ಅವರನ್ನು ಫ್ರಾನ್ಸಿನ ಮಿಲಿಟರಿ ಆಸ್ಪತ್ರೆಯೊಂದಕ್ಕೆ ಸೇರಿಸಲಾಯ್ತು. ಅಲ್ಲಿಯೇ ಅವರ ಉಸಿರಿನ ಅಂತ್ಯವಾಯಿತು.

ಪ್ಯಾಲಿಸ್ತೀನಿಯರ ಹೋರಾಟ ಮಾತ್ರ ಇನ್ನೂ ಅಲ್ಲಿಯೆ ಇದೆ. ನಾಯಕನಿಲ್ಲದ ಸೇನೆ ಅದು. ಶಸ್ತ್ರಾಸ್ತ್ರಗಳಂತೂ ಮೊದಲೇ ಇಲ್ಲ. ಪಕ್ಕದ ಇಸ್ರೇಲಿನ ದಾಳಿಯು ದಿನಬೆಳಗಾದರೆ. ಆದರೂ ಅರಾಫತ್ ರು ಮಾಡಿದ ಎರಡು ಅತಿದೊಡ್ಡ ಕೆಲಸಗಳೆಂದರೆ; ಒಂದು, ಪ್ಯಾಲಿಸ್ತೀನ್ ಎಂದರೆ ಇನ್ನು ಗಾಝಾಪಟ್ಟಿ, ಪಶ್ಚಿಮ ದಂಡೆಯಲ್ಲದೇ ಇನ್ನೇನೂ ಸಿಗಲಾರದು ಎಂಬುದನ್ನು ತಮ್ಮ ಜನರಿಗೆ ಅರ್ಥಮಾಡಿಸಿದ್ದು. ಎರಡು, ಇಡೀ ಜಗತ್ತಿನ ಬೆಂಬಲ ತಮ್ಮ ಹೋರಾಟಕ್ಕೆ ಸಿಗುವಂತೆ ಮಾಡಿದ್ದು.

ಇಸ್ರೇಲಿನ ಮಿಲಿಟರಿ ಅದೆಷ್ಟೇ ದೊಡ್ಡದಿರಲಿ, ಬಲಿಷ್ಠವಿರಲಿ ಜಾಗತಿಕ ನ್ಯಾಯಕ್ಕೆ ಅದು ತಲೆಬಾಗಲೇಬೇಕು. ಎರಡನೇ ವಿಶ್ವಯುದ್ಧಾನಂತರ 'ಮಾನವನ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಮಾನತೆ, ಅತಿಕ್ರಮಣವನ್ನು ವಿರೋಧಿಸುವುದು' ಈ ತತ್ವಗಳನ್ನು ಎಲ್ಲಾ ದೇಶಗಳೂ ಒಪ್ಪಿವೆ. ಅದನ್ನೂ ಉಲ್ಲಂಘಿಸಿ ನಡೆದ ಇಸ್ರೇಲ್ ಅಪರಾಧಿ ಎಂದು ಅಂತರಾಷ್ಟ್ರೀಯ ಕೋರ್ಟಿನ ಎಲ್ಲಾ ೧೫ ನ್ಯಾಯಾಧೀಶರುಗಳೂ ಒಪ್ಪುತ್ತಾರೆ, ಈ ಬಗ್ಗೆ ಭಿನ್ನಾಭಿಪ್ರಾಯವೇ ಇಲ್ಲ.

ಅಂತಾರಾಷ್ಟ್ರೀಯ ಕೋರ್ಟು ಮತ್ತು ಜಾಗತಿಕ ಬೆಂಬಲಗಳನ್ನು ಮುಂದಿಟ್ಟುಕೊಂಡು ಪ್ಯಾಲಿಸ್ತೀನಿನ ಹೊಸ ನಾಯಕತ್ವವು ಇನ್ನು ತನ್ನ ಗುರಿಯನ್ನು ನಿಶ್ಚಿತಗೊಳಿಸಬೇಕಿದೆ. ದಾಳಿಗೆ ಪ್ರತಿ ದಾಳಿ ಮಾಡುತ್ತ ಹೋಗುವುದಕ್ಕಿಂತ ತನಗೇನು ಬೇಕು, ಎಷ್ಟು ಬೇಕು ಎಂಬುದನ್ನು ಸ್ಪಷ್ಟ ದೃಢ ಸ್ವರದಲ್ಲಿ ಹೇಳಬೇಕಾಗಿದೆ. ಅಪರಾಧಿಯಾಗಿರುವ ಇಸ್ರೇಲನ್ನು ಮಾತುಕತೆಗೆ ಕರೆಯುವಂತಿಲ್ಲ. ಎಲ್ಲ ಒಪ್ಪಂದಗಳನ್ನೂ ಮುರಿದು ಹಾಕಿರುವ ಆ ದೇಶವನ್ನು ಮಾತುಕತೆಗೆ ಕರೆಯುವುದೇ ತಪ್ಪು, ವ್ಯರ್ಥ. ಬಂದರೆ ಅತಿಕ್ರಮಿತ ಪ್ರದೇಶಗಳನ್ನು ತೆರವು ಮಾಡಿಯೇ ಅವರು ಬರಬೇಕು ಎಂದು ಪ್ಯಾಲಿಸ್ತಿನ್ ಮುಂದಾಳತ್ವವು ಗಟ್ಟಿಯಾಗಿ ನಿಲ್ಲಬೇಕು.

ಯಾರೇ ಮುಂದಾಳತ್ವ ವಹಿಸಲಿ, ಪ್ಯಾಲಿಸ್ತೀನಿಯರಿಗೆ ಮಾನವ ಹಕ್ಕುಗಳು ಪೂರ್ಣವಾಗಿ ದೊರೆಯಬೇಕು. ಹಿಟ್ಲರ್ ಯಹೂದಿ ಜನಾಂಗದ ನಾಶಕ್ಕೆ ಹೊರಟಿದ್ದ. ಈಗ ಆ ಜನಾಂಗವು ಪ್ಯಾಲಿಸ್ತೀನಿಯರನ್ನು ಅಳಿಸಿಹಾಕಲು ಹೊರಟಿದೆ. ಬದುಕುಳಿದ ಪ್ಯಾಲಿಸ್ತೀನಿಯುರು ನಾಳೆ ಇನ್ನೊಂದು ಜನಾಂಗದ ಮೇಲೆ ಸೇಡು ತೀರಿಸಿಕೊಳ್ಳಬಾರದೆಂದರೆ ಅವರಿಗೆ ಬೇಗ ನ್ಯಾಯಸಿಗಲೇಬೇಕು.

ಕಾವ್ಯ

ಬಾಳ ಬವಣೆಯ ದುಗುಡಕ್ಕೆ ಬಿದ್ದಾಗ
ಸಾಂತ್ವನವ ಹೇಳಿ ಕಣ್ಣೀರೊರೆಸುವ
ಕರುಣೆಯ ಕೈ

ಗಾಢ ನಿದ್ರೆಯಲಿ ಮೈಮರೆತಾಗ
ಅರುಣರಾಗದ ಹನಿ ಸಿಂಪಡಿಸಿ
ಎಚ್ಚರಿಸುವ ಗಂಟೆ

ಕತ್ತಲೆಯ ತಿಮಿರಾಂಧಕಾರದಲಿ ಸಿಲುಕಿ
ದಾರಿತಪ್ಪಿ ಕಂಗಾಲಾಗಿ ಅಲೆವಾಗ
ಕೈ ಹಿಡಿದು ನಡೆಸಿ ಸರಿದಾರಿಗೊಯ್ಯುವ ದಾರಿ ದೀಪ

ನನ್ನವರೆಂಬುವರ ಕಾಣದೆ
ತಬ್ಬಲಿಯಂತೊಬ್ಬನೇ ಚಿಂತಿಸುವಾಗ
ನಾನಿದ್ದೇನೆಂದು ಎದೆತಟ್ಟಿ ತಬ್ಬುವ ಆಪ್ತಬಂಧು

ಮೊಮ್ಮಕ್ಕಳು ಮಕ್ಕಳು ಹೆಂಡತಿ
ಎಷ್ಟರಮಟ್ಟಿಗೆ ನಂಬುತಿ?
ಗಂಟು ಬಿಡಿಸಲು ಹೋಗಿ ಸೋತಾಗ
ನವುರುಗಾಳಿ ಬೀಸಿ ಶ್ರಮವಾರಿಸುವ ವನದೇವಿ

–ಡಾ|| ಬೋರೇಗೌಡ ಚಿಕ್ಕಮರಳಿ

ಜನಪದ ನಿಲಯದ ಅಂತರಂಗದಲ್ಲಿ -೧೪

-ಸುರೇಂದ್ರ ಕೌಲಗಿ.



೧೯೬೦ ನೇ ಇಸವಿಯು ಒಂದು ಮಹತ್ವದ ವರ್ಷವಾಗಿ ಸಿದ್ಧವಾಯಿತು. ಈ ಇಸವಿಯ ಆಗಸ್ಟ್ ೧೨ ರಂದು ಜನಪದ ಸೇವಾ ಟ್ರಸ್ಟಿನ ಸ್ಥಾಪನೆ ಔಪಚಾರಿಕವಾಗಿ ಆಯಿತು. ಅಂದರೆ ಆಗಿನ ಸಂಘ ನೊಂದಣಿ ಕಾನೂನಿನ ಅಡಿಯಲ್ಲಿ ಜನಪದ ಸೇವಾಟ್ರಸ್ಟ್ ನೊಂದಣಿಗೊಂಡು ಅಸ್ತಿತ್ವಕ್ಕೆ ಬಂದಿತು. ದೇಶಕ್ಕೆ ಸ್ವಾತಂತ್ರ್ಯ ಬಂದು ೧೩ ವರ್ಷಗಳಷ್ಟೆ ಆಗಿದ್ದವು. ಅಂದರೆ ದೇಶದ ಅಭಿವೃದ್ಧಿಯ ನಕ್ಷೆ ಇನ್ನೂ ಅಸ್ಪಷ್ಟವಾಗಿತ್ತು. ಯೋಜನೆಯ ಯುಗ ಆಗತಾನೆ ಪ್ರಾರಂಭವಾಗಿತ್ತು. ಸ್ವಯಂ ಸೇವಾ ಸಂಸ್ಥೆಗಳ ಅಗತ್ಯವನ್ನು ಮನಗಾಣಲಾಗುತ್ತಿತ್ತು. ಆಗ ತಾನೆ ಸಮುದಾಯ ಅಭಿವೃದ್ದಿ ಯೋಜನೆಯ ವಿಚಾರವನ್ನು ನೆಹರುರವರ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿದ್ದ ಎಸ್.ಕೆ.ದೇ. ಹುಟ್ಟುಹಾಕಿದ್ದರು. ದೇಶದ ತುಂಬಾ ಬ್ಲಾಕ್ ಡೆವಲಪ್‌ಮೆಂಟ್ ಆಫೀಸುಗಳು ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳು ತಲೆಯೆತ್ತಿಕೊಂಡಿದ್ದವು. ಆಗ ರಾಷ್ಟ್ರೀಯ ಮುಖಂಡರಲ್ಲಿ ಒಬ್ಬರಾಗಿದ್ದ ಯು.ಎನ್.ದೇಬರ್‌ಭಾಯಿ ಈ ಯೋಜನೆಗಳ ಪ್ರವರ್ತಕರಲ್ಲಿ ಒಬ್ಬರಾಗಿದ್ದರು.

ಜವಹರಲಾಲ್ ನೆಹರು ಈ ಯೋಜನೆಯ ಬಗ್ಗೆ ಬಹಳಷ್ಟು ಗುಣಗಾನ ಮಾಡುತ್ತಿದ್ದರು. ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯ ಮೂಲಕ ಗ್ರಾಮಗಳ ಅಭಿವೃದ್ಧಿಯನ್ನು ಈ ಯೋಜನೆಗಳ ಮೂಲಕ ಹಮ್ಮಿಕೊಳ್ಳಲಾಗಿತ್ತು. ಈ ಸಂಸ್ಥೆಗಳಿಗೂ ಮತ್ತು ಗ್ರಾಮಪಂಚಾಯಿತಿಗಳಿಗೂ ಚುನಾವಣೆಗಳನ್ನು ಸಹ ನಡೆಸಲಾಗುತ್ತಿತ್ತು. ಗ್ರಾಮೀಣ ಭಾರತದಲ್ಲಿ ಈ ಯೋಜನೆಗಳು ಬಹಳಷ್ಟು ರಾಜಕೀಯವನ್ನು ಗ್ರಾಮ ಗ್ರಾಮಗಳಲ್ಲಿ ತಲೆ ಎತ್ತುವಂತೆ ಮಾಡಿತು. ಗ್ರಾಮಪಂಚಾಯಿತಿಯ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಅವಕಾಶವಿಲ್ಲವೆಂದು ತೀರ್ಮಾನವಾಗಿತ್ತಾದರೂ ಸಹ ಪರೋಕ್ಷವಾಗಿ ರಾಜಕೀಯ ಪಕ್ಷ ಗಳು ಅಭಿವೃದ್ದಿ ಷಮಿತಿಗಳಿಗೆ ಮತ್ತು ಪಂಚಾಯಿತಿಗಳಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸುತ್ತಿದ್ದವು. ಆಗ ಕಾಂಗ್ರೆಸ್ ಪಕ್ಷವೊಂದೆ ಎಲ್ಲೆಲ್ಲೂ ಬಲಶಾಲಿಯಾಗಿತ್ತು. ಆದ್ದರಿಂದ ಈ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರೆ ಆಯ್ಕೆಯಾಗಿ ಬರುತ್ತಿದ್ದುದು ಸಹಜವಾಗಿತ್ತು. ಆಗ ತಾನೆ ಹುಟ್ಟಿಕೊಂಡಿದ್ದ ಪ್ರಜಾ ಸಮಾಜವಾದಿ ಪಕ್ಷದ ಕೆಲವು ಕಾರ್ಯಕರ್ತರು ಅಲ್ಲಲ್ಲಿ ಗೆದ್ದು ಬರುತ್ತಿದ್ದರು. ಅಲ್ಲದೆ ಕೆಲವು ಬಂಡಾಯ ಅಭ್ಯರ್ಥಿಗಳೂ ಜಯವನ್ನು

ಸಾಧಿಸುತ್ತಿದ್ದರು. ಆದರೆ ಒಟ್ಟಾರೆ ಹಳೆ ಮೈಸೂರಿನ ಗ್ರಾಮೀಣ ಪ್ರದೇಶಗಳಲ್ಲಿ ಕಾಂಗ್ರೆಸ್ ಪಕ್ಷವೇ ಪ್ರಶ್ನಾತೀತ ಪಕ್ಷವಾಗಿ ಬೆಳೆದುಕೊಂಡು ಬರುತ್ತಿತ್ತು.

ಗ್ರಾಮೀಣ ಅಭಿವೃದ್ಧಿಯ ಹೆಸರಿನಲ್ಲಿ ಈ ಸಮುದಾಯ ಅಭಿವೃದ್ಧಿ ಯೋಜನೆ ಪ್ರಾರಂಭವಾಗಿತ್ತಾದರೂ ಪಕ್ಷ ರಾಜಕಾರಣದಿಂದಾಗಿ ಗ್ರಾಮಗಳೆಲ್ಲವೂ ತಮ್ಮ ಮೊದಲಿನ ಒಗ್ಗಟ್ಟನ್ನು ಕಳೆದುಕೊಂಡವು. ಗ್ರಾಮದ ಪ್ರತಿಯೊಂದು ಮನೆಯೂ ಸಹ ರಾಜಕೀಯ ಕುರುಕ್ಷೇತ್ರವಾಗಿ ಪರಿಣಮಿಸಿತು. ಇದರಿಂದಾಗಿ ಸಮುದಾಯದ ಅಭಿವೃದ್ಧಿಯ ವಿಷಯ ಗೌಣವಾಗಿ ಪಕ್ಷ ರಾಜಕಾರಣದ ವಿಷಯ, ವ್ಯಕ್ತಿ ಪ್ರತಿಷ್ಠೆಯ ವಿಷಯ ಮುಖ್ಯ ಸಂಗತಿಗಳಾದವು. ಆ ಸಮಯದಲ್ಲಿ ವೃದ್ಧಾಪ್ಯದತ್ತ ಸಾಗುತ್ತಿದ್ದ ಜನಪ್ರಿಯ ಪ್ರಧಾನಿ ಜವಾಹರಲಾಲ್ ನೆಹರುರವರ ನಂತರ ಯಾರು? ಎಂಬ ಪ್ರಶ್ನೆಯು ಕೇಳಿ ಬರುತ್ತಿತ್ತು. ಈ ಪ್ರಶ್ನೆಗೆ ಸಾಮಾನ್ಯವಾದ ಉತ್ತರ ಗ್ರಾಮ ಪಂಚಾಯಿತಿಗಳೆ ಉತ್ತರಾಧಿಕಾರಿಗಳೆಂದು ಕೇಳಿ ಬರುತ್ತಿತ್ತು. ಅಂದರೆ ಅಷ್ಟರ ಮಟ್ಟಿಗೆ ವಿಕೇಂದ್ರೀಕೃತ ಪ್ರಜಾಪ್ರಭುತ್ವದ ಕಲ್ಪನೆ ಈ ಸಮುದಾಯ ಅಭಿವೃದ್ಧಿ ಯೋಜನೆಯ ಮೂಲಕ ಎಲ್ಲೆಲ್ಲೂ ಬೆಳೆದಿತ್ತು. ಆದರೆ ರಾಜಕಾರಣವು ಈ ಕಲ್ಪನೆಯನ್ನು ಸುಳ್ಳು ಮಾಡುವತ್ತ ಸಾಗಿತ್ತು.

ಸಮುದಾಯದ ಅಭಿವೃದ್ಧಿ ಕಾರ್ಯಕ್ರಮ ದೇಶ ಹಾಕಿಕೊಂಡಿದ್ದ ಪಂಚವಾರ್ಷಿಕ ಯೋಜನೆಯ ಶಿಶುವಾಗಿ ಹೊರಬಂದಿತ್ತು. ಈ ಕಾರ್ಯಕ್ರಮವನ್ನು ರೂಪಿಸುವಲ್ಲಿ ಅಶೋಕ್ ಮೆಹತಾರಂಥ ನಿಷ್ಠ ಸಮಾಜವಾದಿ ನಾಯಕರ ಒತ್ತಾಸೆಯು ಸಹ ಸೇರಿಕೊಂಡಿತ್ತು. ಆಡಳಿತಾತ್ಮಕವಾಗಿ ವಿಕೇಂದ್ರಿಕೃತಗೊಂಡ ಪಂಚಾಯತ್ ರಾಜ್ ವ್ಯವಸ್ಥೆ ದೇಶದ ಸ್ವರೂಪವನ್ನೇ, ಸಮಾಜದ ಗುಣಧರ್ಮವನ್ನೇ ಪರಿವರ್ತಿಸುವುದೆಂಬ ಆಶೆಯನ್ನು ಸಹ ಇಟ್ಟುಕೊಳ್ಳಲಾಗಿತ್ತು. ಸಮುದಾಯ ಅಭಿವೃದ್ಧಿ ಯೋಜನೆಯ ಪ್ರಾರಂಭದ ದಿನಗಳಲ್ಲಿಯೆ ಆಚಾರ್ಯ ವಿನೋಬಾ ಭಾವೆಯವರ ನೇತೃತ್ವದಲ್ಲಿ ಭೂದಾನ ಆಂದೋಲನ ನಡೆಯುತ್ತಿತ್ತು. ಈ ಆಂದೋಲನದ ನೇತೃತ್ವವನ್ನು ಸರ್ವಸೇವಾ ಸಂಘ ವಹಿಸಿಕೊಂಡಿತ್ತು. ಗಾಂಧೀಜಿಯವರು ತಮ್ಮ ಜೀವಿತದ ಕಾಲದಲ್ಲಿ ಹುಟ್ಟುಹಾಕಿದ್ದ ೧೮ ಬಗೆಯ ರಚನಾತ್ಮಕ ಸಂಸ್ಥೆಗಳು ಅವರ ಮರಣಾನಂತರ ಏಕೀಕೃತಗೊಂಡು ಸರ್ವ ಸೇವಾ ಸಂಘ ಎಂಬ ಹೆಸರನ್ನು ಪಡೆದಿದ್ದವು. ಜಯಪ್ರಕಾಶ್ ನಾರಾಯಣರು ಭೂದಾನ ಆಂದೋಲನದಿಂದ ಆಕರ್ಷಿತರಾಗಿ ಸಮಾಜವಾದಿ ಪಕ್ಷವನ್ನು ತೊರೆದು ವಿನೋಬಾರ ಭೂದಾನ ಆಂದೋಲನಕ್ಕೆ ಧುಮುಕಿದರಷ್ಟೆ ಅಲ್ಲ ಭೂದಾನದ ಮೂಲಕ ಗ್ರಾಮೋದ್ಯೋಗ ಪ್ರಧಾನವಾದ ಸರ್ವೋದಯ ಸಮಾಜ ರಚನೆಯ ಈ ಆಂದೋಲನಕ್ಕೆ ತಮ್ಮ ಜೀವನವನ್ನೆ ದಾನವಾಗಿ ಕೊಟ್ಟರು. ಸರ್ವ ಸೇವಾ ಸಂಘ, ಜಯಪ್ರಕಾಶ್ ನಾರಾಯಣ್ ಮತ್ತು ಆಚಾರ್ಯ ವಿನೋಬಾ ಭಾವೆ ಇವರೆಲ್ಲರು ಗ್ರಾಮಾಭಿವೃದ್ಧಿಯ ಬಗ್ಗೆ ತೀವ್ರತರವಾದ ಕಳಕಳಿಯನ್ನು ಹೊಂದಿದ್ದರೆಂಬುದು ನೆಹರುರವರಿಗೂ ಮತ್ತು ಅಂದಿನ ಕೇಂದ್ರ ಸರ್ಕಾರಕ್ಕೂ ಅರಿವಿತ್ತು. ಆದ್ದರಿಂದ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಜನ್ಮವೆತ್ತಿ ಬಂದ ಸಮುದಾಯ

ಅಭಿವೃದ್ಧಿ ಕಾರ್ಯಕ್ರಮದ ರೂಪ- ರೇಷೆಗಳನ್ನು ತಯಾರಿಸುವ ದೃಷ್ಟಿಯಿಂದ ದಿಲ್ಲಿಯಲ್ಲಿ ಯೋಜನಾ ಆಯೋಗವು ಕರೆದಿದ್ದ ಸಭೆಗೆ ವಿನೋಬಾ ಸಹ ಆಹ್ವಾನಿಸಲ್ಪಟ್ಟಿದ್ದರು. ಆಗ ವಿನೋಬಾ ತಮ್ಮ ಭೂದಾನ ಯಜ್ಞ ಚಳುವಳಿಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಆದರೂಕೂಡ ಕೇಂದ್ರ ಸರ್ಕಾರದ ಆಹ್ವಾನದ ಮೇರೆಗೆ ತಮ್ಮ ಯಾತ್ರೆ ನಡೆಯುತ್ತಿದ್ದ ಹಳ್ಳಿಯಿಂದ ದಿಲ್ಲಿಯವರೆಗೆ ನಡೆದುಕೊಂಡೆ ಹೊರಟರು. ನಂತರ ದಿಲ್ಲಿಯಲ್ಲಿ ನಡೆಯುತ್ತಿದ್ದ ಯೋಜನಾ ಆಯೋಗದ ಸಭೆಯಲ್ಲಿ ಭಾಗವಹಿಸಿದರು. ಆ ಸಭೆಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯ ಕುರಿತು ವಿನೋಬಾರ ಅಭಿಪ್ರಾಯವನ್ನು ತಜ್ಞರು ಕೇಳಿದರು. ಆಗ ವಿನೋಬಾ ಒಂದು ಬಹು ವ್ಯವಹಾರಿಕವಾದ ಮತ್ತು ಸರಳವಾದ ವಿಷಯವನ್ನು ಆ ತಜ್ಞರಿಂದ ತಿಳಿಯಬಯಸಿದರು. ಅದಕ್ಕಾಗಿ ಅವರು ಒಂದು ಪ್ರಶ್ನೆಯನ್ನು ಕೇಳಿದರು. ದೇಶದಲ್ಲಿ, ಮುಖ್ಯವಾಗಿ, ಹಳ್ಳಿಗಳಲ್ಲಿ ಸಮುದಾಯವೆ ಇಲ್ಲದಿರುವಾಗ ಸಮುದಾಯ ಅಭಿವೃದ್ಧಿಯ ಕಾರ್ಯಕ್ರಮ ಎಷ್ಟರ ಮಟ್ಟಿಗೆ ತರವಾದದ್ದು? ಎಂಬುದು ಆ ಪ್ರಶ್ನೆಯಾಗಿತ್ತು. ಗ್ರಾಮಗಳಲ್ಲಿ ಮೊದಲು ಸಮುದಾಯದ ಭಾವನೆಯನ್ನುಂಟುಮಾಡದೆ ಸಮುದಾಯ ಅಭಿವೃದ್ಧಿಯ ಕುರಿತು ಮಾತನಾಡುವುದೆಂದರೆ ಗಾಡಿಯ ಮುಂದೆ ಕುದುರೆಯನ್ನು ಕಟ್ಟಿದಂತಲ್ಲವೆ? ಎಂಬುದು ಅವರ ಎರಡನೆಯ ಪ್ರಶ್ನೆಯಾಗಿತ್ತು. ಗಾಂಧಿಯವರ ನಿಕಟವರ್ತಿಯಾಗಿ ಅವರ ವಿಚಾರಗಳನ್ನು ಕರತಲಾಮಲಕವನ್ನಾಗಿ ಮಾಡಿಕೊಂಡಿದ್ದ ವಿನೋಬಾರಿಂದ ಇಂಥ ಪ್ರಶ್ನೆಗಳು ಬರುವುದು ಸಹಜವೇ ಆಗಿತ್ತು. ಆದರೆ ಕಾನೂನು ಮತ್ತು ಹಣದ ಬಲದಿಂದ ಮತ್ತು ರಾಜಕಾರಣದ ಊರುಗೋಲಿನಿಂದ ಗ್ರಾಮಗಳ ಅಭಿವೃದ್ಧಿಯನ್ನು ಕುರಿತು ಆಲೋಚನೆ ಮಾಡುತ್ತಿದ್ದ ಯೋಜನಾ ಆಯೋಗಕ್ಕೂ ಮತ್ತು ಭೂದಾನ ಯಜ್ಞ ಮೂಲಕ ಗ್ರಾಮದ ಭೂಮಿ ಗ್ರಾಮದಲ್ಲಿಯೇ ಉಳಿಯುವಂತೆ ಮಾಡುವುದರ ಮೂಲಕ ಗ್ರಾಮದಲ್ಲಿ ಸಮುದಾಯದ ಭಾವನೆಯನ್ನು ನಿರ್ಮಿಸಲು ಹೊರಟಿದ್ದ ವಿನೋಬಾರಿಗೂ ಮಧ್ಯೆ ದೊಡ್ಡ ಭೇದ ಉಂಟಾಯಿತು. ವಿನೋಬಾ ಎಂದೂ ತಮ್ಮ ವಿಚಾರವನ್ನು ಬಲವಂತವಾಗಿ ಯಾರ ಮೇಲೂ ಹೇರಿದವರಲ್ಲ. ಆದ್ದರಿಂದ ಸಮುದಾಯದ ಅಭಿವೃದ್ಧಿಯ ಕಾರ್ಯವನ್ನು ಸರ್ಕಾರಕ್ಕೆ ಬಿಟ್ಟು ತಾವು ಪುನಃ ಭೂದಾನ ಯಜ್ಞ ಮೂಲಕ ಭಾರತದಲ್ಲಿ ಸರ್ವೋದಯ ಸಮಾಜ ರಚನೆಗಾಗಿ ಪುನಃ ತಮ್ಮ ನಡಿಗೆಯನ್ನು ಗ್ರಾಮಗಳತ್ತ ಸಾಗಿಸಿದರು. ಇಂಥ ಪರಿಸ್ಥಿತಿಯ ಹಿನ್ನಲೆಯಲ್ಲಿ ೧೯೬೦ ಆಗಸ್ಟ್ ತಿಂಗಳಲ್ಲಿ ಭಾರತದ ಲಕ್ಷಾವಧಿ ಗ್ರಾಮಗಳಲ್ಲಿ ಒಂದಾದ ಮೇಲುಕೋಟೆ ಗ್ರಾಮದಲ್ಲಿ ವಿನೋಬಾ, ಗಾಂಧಿ, ಜೆ.ಪಿ ಮುಂತಾದವರ ಗ್ರಾಮ ನಿರ್ಮಾಣದ ಕನಸನ್ನು ಹೊತ್ತು ಜನಪದ ಸೇವಾ ಟ್ರಸ್ಟಿನ ಜನನವಾಯಿತು. *(ಮುಂದುವರೆಯುವುದು...)*

ಕಣ್ಮರೆಯಾದ ಸಂಗೀತ ಸಾಮ್ರಾಜ್ಞೆ ಎಂ. ಎಸ್. ಸುಬ್ಬುಲಕ್ಷ್ಮಿ

ಜನಸಾಮಾನ್ಯರ ಕಂಬನಿ

✝ ದಂತ ಕಥೆಯೊಂದು ಕಳೆದು ಹೋಯಿತು.

✝ ಅವರ ಜೀವಿತಾವಧಿಯಲ್ಲಿಯೆ ನಾವು ಇರುವಂತೆ ಅವಕಾಶ ಕೊಟ್ಟ ದೇವರಿಗೆ ನಾವು ಕೃತಜ್ಞ.

✝ ನಾನು ಕರ್ನಾಟಕ ಸಂಗೀತದ ಬಗ್ಗೆ ತಿಳಿಯದವ. ಆದರೆ ಸುಬ್ಬುಲಕ್ಷ್ಮಿಯವರ ವೆಂಕಟೇಶ ಸುಪ್ರಭಾತವು ನನಗೆ ಶಾಂತಿಯನ್ನು ಕೊಟ್ಟಿತು. ವಿಶ್ವದಲ್ಲೆಲ್ಲಾ ಪ್ರಕಾಶಿಸಿದ ಭಾರತೀಯ ಕಿರೀಟದಲ್ಲಿ ರತ್ನ ಸುಬ್ಬುಲಕ್ಷ್ಮಿ.

✝ ಸುಬ್ಬುಲಕ್ಷ್ಮಿಯವರ ನಿಧನದೊಂದಿಗೆ ಭಾರತೀಯ ಸಂಗೀತ ಇತಿಹಾಸದ ಮಹತ್ವದ ಅಧ್ಯಾಯವೊಂದು ಮುಗಿಯಿತು.

✝ ಎಂ.ಎಸ್.ರವರು ಹೇಳಿದ ವೆಂಕಟೇಶ ಸುಪ್ರಭಾತವು ರಾಷ್ಟ್ರದ ಐಕ್ಯತೆಯ ಸಾಧನವಾಗಿತ್ತು. ಅವರು ಈ ಜಗತ್ತನ್ನು ಬಿಟ್ಟು ಹೋಗಿದ್ದರೂ ತಮ್ಮ ಹಾಡುಗಳ ಮೂಲಕ ನಮ್ಮೊಂದಿಗಿರುತ್ತಾರೆ.

✝ ತಿರುಪತಿ ಬ್ರಹ್ಮೋತ್ಸವದ ಸಮಯದಲ್ಲಿ ಅವರು ಹೇಳುತ್ತಿದ್ದ ಅಣ್ಣಮ್ಮಾಚಾರ್ಯ, ಪುರಂದರದಾಸ ಮತ್ತು ತ್ಯಾಗರಾಜರ ಕೀರ್ತನೆಗಳು ಸಾವಿರಾರು ಯಾತ್ರಿಕರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು.

✝ ೧೯೪೪ರಲ್ಲಿ ದಿಲ್ಲಿಯಲ್ಲಿ ಸುಬ್ಬುಲಕ್ಷ್ಮಿಯವರ ಸಂಗೀತ ಕಛೇರಿ ನಡೆಯಿತು. ಅಲ್ಲಿ ಪಂಡಿತ್ ನೆಹರು, ಜನರಲ್‌ಕಾರಿಯಪ್ಪ, ಚಕ್ರವರ್ತಿ ರಾಜಗೋಪಾಲಚಾರಿ ಹಾಜರಿದ್ದರು. ಸಂಗೀತ ಮುಗಿದ ನಂತರ ನೆಹರು ಈ ರೀತಿ ಉದ್ಗಾರ ತೆಗೆದರು. "ನಾನು ಯಾರು? ಸಂಗೀತ ಸಾಮ್ರಾಜ್ಞಿಯ ಮುಂದೆ ಕೇವಲ ಪ್ರಧಾನಮಂತ್ರಿ."

✝ ಸುಬ್ಬುಲಕ್ಷ್ಮಿಯವರ ಬೆಲೆಯನ್ನು ಯಾವುದೇ ರಾಷ್ಟ್ರೀಯ ಅಥವಾ ಅಂತರ ರಾಷ್ಟ್ರೀಯ ಬಹುಮಾನಗಳಿಂದ ಅಳೆಯಲು ಸಾಧ್ಯವಿಲ್ಲ. ಅವರು ದೇವಕನ್ಯೆ. ದೇವಕನ್ಯೆಗೆ ಸಾವಿಲ್ಲ.

✝ ಕರ್ನಾಟಕ ಸಂಗೀತದ ಅಸಂಖ್ಯಾತ ರಾಗಗಳಲ್ಲಿಯ ಒಂದಕ್ಕೆ ಸುಬ್ಬುಲಕ್ಷ್ಮಿಯವರ ಹೆಸರನ್ನಿಡಬೇಕು. ಅದು ಅವರ ಪ್ರತಿಭೆಗೆ ಸೂಕ್ತ ಶ್ರದ್ಧಾಂಜಲಿ.

✝ ಭಾರತೀಯ ತತ್ವಶಾಸ್ತ್ರದ ಪ್ರಕಾರ ಮೋಕ್ಷವನ್ನು ಭಕ್ತಿಯೋಗ, ಕರ್ಮಯೋಗ ಇಲ್ಲವೆ ಜ್ಞಾನಯೋಗದ ಮೂಲಕ ಪಡೆಯಬಹುದು. ಆದರೆ ಸುಬ್ಬುಲಕ್ಷ್ಮಿ ಈ ಮೂರೂ ಯೋಗಗಳನ್ನು ಆತ್ಮಶಕ್ತಿ ಪ್ರಚೋದಕವಾದ ತಮ್ಮ ಸಂಗೀತದಲ್ಲಿ ಸಮ್ಮಿಳಿತಗೊಳಿಸಿದ್ದರು.

–ಸಂಗ್ರಹಿಸಿದ್ದು

ತಿಗರಿಯ ಚಕ್ರ ತಿರುಗಿಸಿದ ಯುವ ಕ್ರಾಂತಿಕಾರಿ ಮಿರಮಿರಾ

- ನೀಲತ್ತಹಳ್ಳಿ ಕಸ್ತೂರಿ.

ಮಿರಮಿರಾ ಕೃಷ್ಣ ಮೂರ್ತಿ. ಮೂಲತಃ ಬೆಂಗಳೂರಿನವರೇ. ಈಗ ಮಹಾರಾಷ್ಟ್ರದ ವರ್ಧಾ ಹತ್ತಿರ ಭದ್ರಾವತಿ ಎಂಬ ಗ್ರಾಮದವರಾಗಿದ್ದಾರೆ. ಯಾವ ಊರಾದರೇನು, ಅವರು ಇಡೀಭಾರತದವರು., ಜೈ ಜಗತ್ ಸಂಪ್ರದಾಯದವರು. ಅವರು ಭದ್ರಾವತಿ ಗ್ರಾಮದಲ್ಲಿ ಕುಂಭಕಲೆಯ(ಮಣ್ಣಿನ ವಸ್ತುಗಳ ತಯಾರಿಕೆ) ಘಟಕವನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ. ಗ್ರಾಮೋದಯ ಸಂಘವನ್ನು ಕಟ್ಟಿದ್ದಾರೆ. ಆ ಮೂಲಕ ಈ ಪ್ರಾಚೀನ ಕರಕುಶಲ ಕಲೆಯನ್ನು ಮತ್ತೆ ಚಿಗುರಿಸಲು ಶ್ರಮಿಸುತ್ತಿದ್ದಾರೆ. ಜೊತೆಗೆ ಕುಶಲ ಕರ್ಮಿಗಳಿಗೆ ಉದ್ಯೋಗದ ನೆಲೆ ದೊರಕಿಸಲು ಹೆಣಗುತ್ತಿದ್ದಾರೆ.

ಕೃಷ್ಣಮೂರ್ತಿ ವಿದ್ಯಾರ್ಥಿ ದೆಸೆಯಲ್ಲೆ ಕ್ರಾಂತಿಕಾರಕ ಹಾಗೂ ಪ್ರತಿಭಟನೆಯ ಸ್ವಭಾವ ಹೊಂದಿದ್ದರು. ಅವರು 'ಕ್ವಿಟ್ಇಂಡಿಯಾ' ಕರೆಗೆ ಓಗೊಟ್ಟು ಚಳುವಳಿಗೆ ಧುಮುಕಿದಾಗ ೨೭ ವರ್ಷದ ತರುಣ. ಆಗ ಶಾಂತಿಯುತ ಸತ್ಯಾಗ್ರಹ ಒಂದೆಡೆ ನಡೆದಿದ್ದರೆ, ಅದಕ್ಕೆ ಸಮಸಮವಾಗಿಯೆ ಭೂಗತ ಚಳುವಳಿಗಳೂ ನಡೆದಿದ್ದವು. ಸಹಜವಾಗಿ ಬಿಸಿರಕ್ತದ ತರುಣರಿಗೆ ಈ ಚಳುವಳಿಗಳದೇ ಸೆಳೆತ. ಜಯಪ್ರಕಾಶನಾರಾಯಣ, ರಾಮ ಮನೋಹರ ಲೋಹಿಯಾ, ಅರುಣಾ ಅಸಫ್ ಆಲಿ ಮುಂತಾದ ರಾಷ್ಟ್ರನಾಯಕರೇ ಈ ಚಳುವಳಿಯ ಮುಂಚೂಣಿಯಲ್ಲಿದ್ದರು. ಕರ್ನಾಟಕದಲ್ಲೂ ಹಿರಿಯರಾದ ರಂಗನಾಥ ದಿವಾಕರರೂ ಭೂಗತ ಚಳುವಳಿಯಲ್ಲಿ ತೊಡಗಿದ್ದರು. ಬೆಂಗಳೂರಿನಲ್ಲಿ ಇಂತಹ ಭೂಗತ ವಿಧ್ವಂಸಕ ಚಳುವಳಿಯಲ್ಲಿ ಕೃಷ್ಣಮೂರ್ತಿಇದ್ದುದು ಆಶ್ಚರ್ಯವೇನಲ್ಲ. ಬಿಸಿರಕ್ತದ ತರುಣ, ಕ್ರಾಂತಿಗಾಗಿ ಚಡಪಡಿಸುತ್ತಿದ್ದರು. ಗಾಂಧೀಜಿ ಬಗ್ಗೆ, ಗಾಂಧೀ ಮಾರ್ಗದ ಬಗ್ಗೆ ಆದರ ಇದ್ದರೂ, ಭೂಗತ ಚಳುವಳಿಯ ಸಾಹಸ, ರೋಮಾಂಚಕತೆಗೆ ಒಲಿದವರು. ಬಾಂಬು ಇಡುವುದು (ಕಚೇರಿಗಳಿಗೆ), ರೈಲು ತಡೆ, ಟೆಲಿಗ್ರಾಫ್ ತಂತಿ ಕತ್ತರಿಸುವಿಕೆ, ಸರ್ಕಾರಿ ಕಚೇರಿಗಳಿಗೆ ಅಡಚಣೆ, ಹೆಚ್ಚುಕಡಿಮೆ ಸರ್ಕಾರವನ್ನೇ ಉರುಳಿಸಿ ರಾಷ್ಟ್ರೀಯ ಪ್ರತಿ ಸರ್ಕಾರವನ್ನೇ ಸ್ಥಾಪಿಸುವ ಹಂಬಲ, ಹುಯಿಲು!

ಮಿರಮಿರಾ ಆಗ ಎಂ. ಎಸ್. ಕೆ. ಅಥವಾ ಕೃಷ್ಣಮೂರ್ತಿ ಎಂದೇ ಗೆಳೆಯರಲ್ಲಿ ಸಲಿಗೆ. ಅವರು ಸ್ನೇಹಿತರೊಂದಿಗೆ ಮಾಡಿದ ಚರ್ಚೆಗಳೆಷ್ಟೊ, ವಾದವಿವಾದಗಳೆಷ್ಟೋ. ತಮ್ಮ ಉಗ್ರಗಾಮಿ ಪಟ್ಟನ್ನು ಅವರು ಸಡಿಲಿಸಿರಲಿಲ್ಲ! ಸಿದ್ದವನಹಳ್ಳಿಯವರದೋ ಶಾಂತಿಸಹನೆಗಳ ಮೃದು ಸ್ಪರ್ಶ. ಇದು ಕೃಷ್ಣಮೂರ್ತಿಯವರನ್ನು ಹದಕ್ಕೆ ತಂದಿತು. ಚಳುವಳಿಯಲ್ಲಿ ಎಂಟು ತಿಂಗಳು ಸೆರೆವಾಸ ಅನುಭವಿಸಿದರು. ಅನಂತರ ಗಾಂಧೀ ವಿಚಾರ ಅಧ್ಯಯನ! ಅವರ ಮನಸ್ಸು ರಚನಾತ್ಮಕ ಕಾರ್ಯದತ್ತ ಹೊರಳಿತು. ಹಳ್ಳಿಗಳ ಕಸಬುಗಳಲ್ಲಿ ಅವರಿಗೆ ಕ್ರಾಂತಿಯ ಸಾಧ್ಯತೆಯ ಸುಳಿವೇ ಸಿಕ್ಕಿತು! ಅದೇ ಸುಮಾರಿಗೆ ಗ್ರಾಮೋದ್ಯೋಗ ಪ್ರಧಾನ ನವ ಆರ್ಥಿಕ ಸಿದ್ಧಾಂತದ ಅಧ್ವರ್ಯು ಜೆ. ಸಿ. ಕುಮಾರಪ್ಪನವರ ವಿಚಾರ ಸ್ಪರ್ಶವೂ

ಲಭಿಸಿತು. ಜೆ. ಸಿ. ಕುಮಾರಪ್ಪನವರ 'ಶಾಶ್ವತ ಅರ್ಥಶಾಸ್ತ್ರ' ಕೃಷ್ಣಮೂರ್ತಿಗೆ ಪಾರಾಯಣ ಗ್ರಂಥವಾಯಿತು.

ಅಖಿಲ ಭಾರತ ಗ್ರಾಮೋದ್ಯೋಗ ಸಂಘಕ್ಕೆ ಕೃಷ್ಣಮೂರ್ತಿ ಸೇರಲು ಸಾವಕಾಶವಾಗಲಿಲ್ಲ. ವರ್ಧಾ ಆಶ್ರಮಕ್ಕೆ ಹೋದರು. ಮಗನವಾಡಿಯಲ್ಲಿ ಕುಮಾರಪ್ಪನವರ ಗರಡಿಯನ್ನುಹೊಕ್ಕರು. ಬಾಹ್ಯ ಕ್ರಾಂತಿಯ ಬೆನ್ನು ಹತ್ತಿದ್ದ ತರುಣ ಈಗ ನಿಜವಾದ ಆಂತರಿಕ ಕ್ರಾಂತಿಯಲ್ಲಿ ತಲ್ಲೀನರಾದರು.

ಕೃಷ್ಣಮೂರ್ತಿ ಈಗ "ಮಿರಮಿರಾ'' ಅವರ(ಮನೆತನದ ಹೆಸರು). ಅವರು 'ಕುಂಭಕಲೆ' ಓದಿದ್ದರು. ಅದನ್ನೇ ಈಗ ಸಾಧನವಾಗಿ ಮಾಡಿಕೊಂಡರು. ಕುಂಭಕಲೆ ನಮ್ಮ ದೇಶದ ಪ್ರಾಚೀನ ಗ್ರಾಮೀಣ ಕುಶಲಕಲೆ, ಇಡೀ ವಿಶ್ವದ್ದೇ ಎನ್ನಬೇಕು. ಹಳ್ಳಿಯ ಅಗತ್ಯಗಳನ್ನು ಪೂರೈಸುವುದು. ಸ್ಥಳೀಯ ಕಚ್ಚಾ ಪದಾರ್ಥವೇ ಅದಕ್ಕೆ ಸಾಕು. ಮಣ್ಣಿನಿಂದ ಕಲೆಯನ್ನು ರೂಪಿಸುವ ಸೃಷ್ಟಿ ಕಾರ್ಯ. ಸಾವಿರಾರು ಕುಂಬಾರರಿಗೆ ಜೀವನೋಪಾಯ. ಕೃಷ್ಣಮೂರ್ತಿ ಈ ಕಲೆಯ, ಈ ಉದ್ಯಮದ ಪುನಶ್ಚೇತನಕ್ಕೆ ಪಣತೊಟ್ಟರು. ಅದೇ ಅವರ ಬಾಳಿನ ಸರ್ವಸ್ವ ಆಯಿತು.

೧೯೬೦ ರಲ್ಲಿ ಚಂದನಪುರದಲ್ಲಿ ಗ್ರಾಮೋದಯ ಸಂಘವನ್ನು ಸ್ಥಾಪಿಸಿದರು. ಜಪಾನಿಗೆ ಹೋಗಿ ಅಲ್ಲಿ ಈ ಮಣ್ಣಿನ ಕಲೆಯಲ್ಲಿ ವಿಶೇಷ ತರಬೇತಿ ಪಡೆದು ಬಂದರು. ಸ್ಥಳೀಯ ಹಳ್ಳಿಗರಿಗೆ ತರಬೇತಿ ವ್ಯವಸ್ಥೆ ಮಾಡಿದರು. ಪರಂಪರೆಯ ರೀತಿಯ ಕುಡಿಕೆ–ಮಡಿಕೆ ಇತ್ಯಾದಿಗಳ ಜೊತೆಗೆ ಹೊಸಹೊಸ ವಿನ್ಯಾಸದ ವಸ್ತುಗಳನ್ನು, ಕಲಾಕೃತಿಗಳನ್ನೂ ರೂಪಿಸಿದರು. ಮಣ್ಣಿನ ಸಾಮಾನುಗಳಿಗೆ ಹೊಳಪು ಕೊಡುವ ತಂತ್ರವನ್ನು ಅಭಿವೃದ್ಧಿ ಪಡಿಸಿದರು. ಹೊಸ ದೃಷ್ಟಿಯ ಜನತೆಗೆ ಆಕರ್ಷಕವಾಗುವಂತೆ ಹಾಗೂ ಉಪಯುಕ್ತವೂ ಆಗುವಂತೆ ಕಲೆಯನ್ನು ಬೆಳೆಸಿದರು. ಹೊಸ ದಿಕ್ಕು ತೋರಿಸಿದರು. ನೂರಾರು ಹಳ್ಳಿಗರಿಗೆ ಅನ್ನ ಕೊಟ್ಟರು. ಹದಿನಾರು ಉತ್ಪಾದನಾಘಟಕಗಳನ್ನು ಸ್ಥಾಪಿಸಿದರು. ಭಾರತದ ಹಲವಾರು ಕಡೆಗಳಲ್ಲಿ ವಸ್ತು–ಪ್ರದರ್ಶನ–ಮಾರಾಟ ಶಿಬಿರಗಳನ್ನು ನಡೆಸಿದರು. ಬೆಂಗಳೂರಿನಲ್ಲೂ ಹಲವು ಬಾರಿ ಇಂತಹ ಪ್ರದರ್ಶನ ನಡೆದಿವೆ.

ಕೃಷ್ಣಮೂರ್ತಿಗೆ ಈಗ ಗ್ರಾಮವೇ ಸರ್ವಸ್ವ. ಅದೇ ಅವರ ಬಾಳು. ಅವರ ಬದುಕು ತೀರಾ ಸರಳ. ಬ್ರಹ್ಮಚಾರಿ. ಗ್ರಾಮವೇ ಅವರ ಸಂಸಾರ. ಅವರ ಕಾರ್ಯಕ್ಷೇತ್ರ ಹಳ್ಳಿ. ಆದರೆ ವಿಚಾರ ವ್ಯಾಪ್ತಿ ಇಡೀಭಾರತ, ಇಡೀ ಜಗತ್ತು. ಈಗ ಅವರು ಎಂಬತ್ತೊಂಬತ್ತು ವರ್ಷದ ಆಜೂ ಬಾಜಿನಲ್ಲಿದ್ದಾರೆ. ಕಣ್ಣಿನ ತೊಂದರೆ ಐದಾರು ವರ್ಷಗಳಿಂದ ಕಾಡುತ್ತಿದೆ. ಆದರೆ ಅವರ ಚೈತನ್ಯ ಕುಗ್ಗಿಲ್ಲ, ಹುರುಪು ಇಂಗಿಲ್ಲ.

ಪ್ರಖ್ಯಾತ ಜಮನ ಲಾಲ್ ಬಜಾಜ್ ಪ್ರಶಸ್ತಿ ಮಿರಮಿರರಾಗೆ ಸಂದಿರುವುದು ಅವರ ಜೀವನ ಸಾಧನೆಗೆ ಅರ್ಪಿಸಿದ ಕೃತಜ್ಞತೆಯ ಗೌರವ. ಅವರಲ್ಲದೆ "ದೇಶ ಸ್ನೇಹಿ'' ಇನ್ನಾರು!!

ಸಂತಾಪ

ಸುನಾಮಿ ಅಲೆಗಳ ದುರಂತಕ್ಕೊಳಗಾದ ಬಾಂಧವರಿಗಾಗಿ ಜನಪದ ವಿಚಾರ ಭಾವಪೂರ್ಣ ಅನುಕಂಪ ಹೊಂದಿದೆ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕವಾಗಲೀ ಚಕ್ ಮೂಲಕವಾಗಲೀ ಕಳುಹಿಸಿ ಈ ಪತ್ರಿಕೆಯು ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com